Office of the,
Joint Director
Local Audit circle, 4th Floor,T.T.M.C.Building,
'A' Block,B.M.T.C.,
Shanthinagar,
Bangalore-560027.

ಕರ್ನಾಟಕ ಸರ್ಕಾರ
(ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ)

ಜಂಟಿ ನಿರ್ದೇಶಕರ ಕಚೇರಿ
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
4ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ,
'ಎ' ಬ್ಲಾಕ್, ಬಿ.ಎಂ.ಟಿ.ಸಿ,
ಶಾಂತಿನಗರ,
ಬೆಂಗಳೂರು–27.

ಸಂಖ್ಯೆ: ಜಂ.ನಿ/ಸ್ಥಲೆಪವ/ಪ್ರಾಲೆಪ/2021–22/ ದಿನಾಂಕ:

ಇವರಿಗೆ,

ಸದಸ್ಯ ಕಾರ್ಯದರ್ಶಿಗಳು,
ಆನೇಕಲ್ ಯೋಜನಾ ಪ್ರಾಧಿಕಾರ,
ನಂ.430 ಅಣ್ಣ ಕಟ್ಟಡ 1ನೇ ಮಹಡಿ,
ಹೆನ್ನಾಗರ ಗೇಟ್ ಹೊಸೂರು ರಸ್ತೆ ಬೆಂಗಳೂರು.

ಮಾನ್ಯರೆ,

ವಿಷಯ: 2020–21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಕಳುಹಿಸುವ ಬಗ್ಗೆ.

*****

ಆನೇಕಲ್ ಯೋಜನಾ ಪ್ರಾಧಿಕಾರ, ಈ ಸಂಸ್ಥೆಯ 2020–21ನೇ ಸಾಲಿನ ಲೆಕ್ಕ ತನಿಖೆಯು ಮುಗಿದಿದ್ದು, ಸದರಿ ಲೆಕ್ಕ ತನಿಖಾ ವರದಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ. ಹಾಗೂ ಈ ವರದಿಯ ಕಂಡಿಕೆಗಳಲ್ಲಿ ಗಮನಿಸಿರುವ ಲೋಪದೋಷಗಳು, ಆಕ್ಷೇಪಣೆಗಳು ಹಾಗೂ ವಸೂಲಾತಿ ಕಂಡಿಕೆಗಳ ಮೇಲೆ ಅಗತ್ಯಕ್ರಮ ತೆಗೆದುಕೊಂಡು ಅನುಸರಣಾ ವರದಿಯನ್ನು ಸೂಕ್ತ ಪ್ರಾಧಿಕಾರದ ಮೂಲಕ ಕೂಡಲೇ ಕಳುಹಿಸಿ ಕೊಡುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು
ಸ್ಥಳೀಯ ಲೆಕ್ಕಪರಿಶೋಧನೆ ವರ್ತುಲ,
ಬೆಂಗಳೂರು.

ಪ್ರತಿಯನ್ನು

1. ಆಯುಕ್ತರು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಯೋಜನಾ ಪ್ರಾಧಿಕಾರ ಆಲಿ ಆಸ್ಕರ್ ರಸ್ತೆ ಬೆಂಗಳೂರು.
2. ಪ್ರಧಾನ ನಿರ್ದೇಶಕರು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, 3ನೇ ಮಹಡಿ ಟಿ.ಟಿ.ಎಂ.ಸಿ. ಕಟ್ಟಡ, ಶಾಂತಿನಗರ, ಬೆಂಗಳೂರು.
3. ಕಚೇರಿ ಪ್ರತಿ.

ಆನೇಕಲ್ ಯೋಜನಾ ಪ್ರಾಧಿಕಾರ 2020–21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಕಂಡುಬಂದಂತಹ ಪ್ರಮುಖ ನ್ಯೂನತೆಗಳು ಮತ್ತು ಆಕ್ಷೇಪಣೆ ಮೊತ್ತ ಹಾಗೂ ವಸೂಲಾತಿ ಮೊತ್ತಗಳ ವಿವರಗಳು.

ಕ್ರ ಸ ಂ.	ಕಂಡಿಕೆ ಸಂಖ್ಯೆ	ಆಕ್ಷೇಪಣೆಯ ಸ್ವರೂಪ	ಆಕ್ಷೇಪಣೆಯಲ್ಲಿಡಲಾದ ಮೊತ್ತ	ವಸೂಲಾತಿಗೆ ಸೂಚಿಸಿದ ಮೊತ್ತ
1.	4	ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸದಿರುವುದು	–	–
2.	6	ಆಯವ್ಯಯ ಅನುಮೋದನೆಯ ಬಗ್ಗೆ	–	–
3.	9	ನಿಗಧಿತ ನಮೂನೆಯಲ್ಲಿ ಸಾಮಾನ್ಯ ನಗದು ವಹಿಯನ್ನು ನಿರ್ವಹಿಸದಿರುವುದು	–	–
4.	20 (ಅ)	ನಿಶ್ಚಿತ ಠೇವಣಿಯಲ್ಲಿನ ಹೂಡಿಕೆಯ ಪರಿಪಕ್ವ ಮೊತ್ತಕಿಂತ ಕಡಿಮೆ ಜಮೆಯಾಗಿರುವುದು	6755795	
5.	23	ರಾಜ್ಯ ನಗರ ಯೋಜನಾ ಮಂಡಳಿಗೆ ಉತ್ತಮತೆ ಶುಲ್ಕದ ಶೇ5%ರಷ್ಟು ಮೊತ್ತ ಪಾವತಿ ವಿವರ	7416993	–
6.	31	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ನೀಡಿ ಉಪಯೋಗಿತ ಪ್ರಮಾಣ ಪತ್ರ ಪಡೆಯದಿರುವುದು	26179860	–
7.	32	ಪಿಂಚಣಿ ವಂತಿಕೆ ವಿವರ	–	–
8.	35	ಮಾಹಿತಿ ಹಕ್ಕು ಅಧಿನಿಯಮದಡಿ ಸಂಗ್ರಹಿಸಿರುವ ಮೊಬಲಗನ್ನು ಸಂಬಂಧಿಸಿದ ಲೆಕ್ಕಶೀರ್ಷಿಕೆಗೆ ಜಮೆ ಮಾಡದಿರುವುದು	560	–
9.	37	ಲೆಕ್ಕ ಪರಿಶೋಧನಾ ಶುಲ್ಕದ ಲೆಕ್ಕಾಚಾರ ವಿವರ	524430	–
		ಒಟ್ಟು	**40877638**	–

ಅಪರ/ಜಂಟಿ ನಿರ್ದೇಶಕರು
ಸ್ಥಳೀಯ ಲೆಕ್ಕಪರಿಶೋಧನೆ ವರ್ತುಲ
ಬೆಂಗಳೂರು.

ಆನೇಕಲ್‌ಯೋಜನಾ ಪ್ರಾಧಿಕಾರದ 2020–21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

1. ಪೀಠಿಕೆ:–

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/72/ಬೆಂ.ರೂ.ಪ್ರಾ/2003 ದಿನಾಂಕ:03–03–2006ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 (1963)ರ ಕರ್ನಾಟಕ ಕಾಯ್ದೆ ಸಂಖ್ಯೆ: 11 ರ 4ಎ ಪ್ರಕರಣದ (1)ನೇ ಪ್ರಕರಣದ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆನೇಕಲ್ ಸ್ಥಳೀಯ ಯೋಜನಾ ಪ್ರದೇಶವನ್ನು ದಿನಾಂಕ:02–03–2006 ರಿಂದ ಜಾರಿಗೆ ಬರುವಂತೆ ಆನೇಕಲ್ ಸ್ಥಳೀಯ ಯೋಜನಾ ಪ್ರದೇಶ ಎಂದು ಕರೆಯಲಾಗಿದೆ.

ಮುಂದುವರೆದು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/31/ಬೆಂ/ರೂ/ಪ್ರಾ/2006 ದಿನಾಂಕ: 19–07–2006 ರಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ (4)ಸಿ ಪ್ರಕರಣದ ಅಡಿಯಲ್ಲಿ ಅಧ್ಯಕ್ಷರು / ಸದಸ್ಯ ಕಾರ್ಯದರ್ಶಿ ಹಾಗೂ ಸದಸ್ಯರನ್ನೊಳಗೊಂಡ ಆನೇಕಲ್ ಯೋಜನಾ ಪ್ರಾಧಿಕಾರವನ್ನು ರಚಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಈ ಪ್ರಕಾರವಾಗಿ ದಿನಾಂಕ:19–07–2006ರಿಂದ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿರುತ್ತದೆ.

ಧ್ಯೇಯೋದ್ದೇಶಗಳು

ಆನೇಕಲ್ ಯೋಜನಾ ಪ್ರದೇಶದ ಯೋಜನಾಬದ್ದ ಬೆಳವಣಿಗಾಗಿ ಮಹಾಯೋಜನೆ (Master Plan) ತಯಾರಿಸುವುದು ಅಭಿವೃದ್ಧಿ ಚಟುವಟಿಕೆಗಳು ಹಾಗೂ ಬೆಳವಣಿಗೆಗಳನ್ನು ಯೋಜನಾಬದ್ದವಾಗಿ ನಿಯಂತ್ರಿಸುವುದು.

ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು 1961ರ ಸೇರ್ಪಡೆ 68(ಸಿ)(2) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು 1965ರ ನಿಯಮ 23(1)ರಂತೆ **ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯವರಿಂದ** ವಾರ್ಷಿಕ ಲೆಕ್ಕ ತಪಾಸಣೆ ಮಾಡುವ ಅಧಿಕಾರವಿರುತ್ತದೆ. ಅದರಂತೆ **ಪ್ರಧಾನ ನಿರ್ದೇಶಕರು ಕರ್ನಾಟಕ, ರಾಜ್ಯ ಲೆಕ್ಕ ಪತ್ರ ಇಲಾಖೆ ರವರ ಪರವಾಗಿ ಜಂಟಿ ನಿರ್ದೆಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಬೆಂಗಳೂರು** ರವರು 2020–21ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡು ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದ ಪ್ರಮುಖ ನ್ಯೂನತೆಗಳನ್ನು ಪ್ರಸ್ತಾಪಿಸಿ ವರದಿಯನ್ನು ಬಿಡುಗಡೆ ಮಾಡಲಾಗಿದೆ. ವರದಿ ಬಿಡುಗಡೆಯಾದ 6 ವಾರಗಳೊಳಗಾಗಿ ಕಂಡಿಕೆವಾರು ಉತ್ತರಗಳನ್ನು ಸಿದ್ದಪಡಿಸಿ ಸಕ್ಷಮ ಪ್ರಾಧಿಕಾರದ ಷರಾ/ಶಿಪಾರಸ್ಸಿನೊಂದಿಗೆ ಕಳುಹಿಸಬೇಕಾಗಿದ್ದು, ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳಿಗೆ ಇದನ್ನು ಪಾಲಿಸಿರುವುದಿಲ್ಲ. ಇನ್ನು ಮುಂದೆ ವರದಿ ತಲುಪಿದ 6 ವಾರಗಳೊಳಗಾಗಿ ಅನುಸರಣಾ ವರದಿಯನ್ನು ಸಕ್ಷಮ ಪ್ರಾಧಿಕಾರದ ಮೂಲಕ ಸಲ್ಲಿಸುವಂತೆ ತಿಳಿಸಲಾಗಿದೆ.

2. ಲೆಕ್ಕ ತಪಾಸಣಾತಂಡದ ವಿವರಗಳು:–

1.	ಲೆಕ್ಕ ಪರಿಶೋಧಕರ ಹೆಸರು	ಶ್ರೀ ಮಹದೇವಸ್ವಾಮಿ.ಕೆ.ಪಿ. ಲೆ.ಪ.ಅ ಶ್ರೀ ರಾಘವೇಂದ್ರ. ಆರ್. ಲೆ.ಪ
2.	ಲೆಕ್ಕ ಪರಿಶೋಧನಾ ಅವಧಿ	2020–21
3.	ಲೆಕ್ಕ ಪರಿಶೋಧನೆ ಪ್ರಾರಂಭ ದಿನಾಂಕ	22–04–2021
4.	ಲೆಕ್ಕ ಪರಿಶೋಧನೆ ಮುಕ್ತಾಯ ದಿನಾಂಕ	30–04–2021
5.	ಉಪಯೋಗಿಸಿದ ಮಾನವ ದಿನಗಳು	12 ಏಕ ಮಾನವ ದಿನಗಳು
6.	ಪುನರ್ ಪರಿಶೀಲನಾ ಅಧಿಕಾರಿಗಳು	ಶ್ರೀ ಕುಪ್ಪೂರ ಲಿಂಗಯ್ಯ, ಅಪರ ನಿರ್ದೇಶಕರು, ಪ್ರಾಂತೀಯ ಕಛೇರಿ, ಬೆಂಗಳೂರು

7.	ಪುನರ್ ಪರಿಶೀಲನಾ ದಿನಾಂಕ	

3. ಪ್ರಾಧಿಕಾರದ ಆಡಳಿತ ವರ್ಗದ ವಿವರಗಳು:–

ಕ್ರ.ಸಂ.	ಪದನಾಮ	ಹೆಸರು ಶ್ರೀಯುತರು /ಶ್ರೀಮತಿ	ದಿನಾಂಕ	
			ರಿಂದ	ವರೆಗೆ
1.	ಅಧ್ಯಕ್ಷರು	ಶ್ರೀ. ಕೆ.ಜಯಣ್ಣ	01.042020	31.03.2021
2.	ಸದಸ್ಯ ಕಾರ್ಯದರ್ಶಿಗಳು	ಶ್ರೀ.ಎನ್.ಎಂ. ನಂಜೇಗೌಡ	01.04.2020	31.03.2021
3.	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು	ಶ್ರೀ.ಕೆ.ಎನ್. ನಾಗರಾಜ	01.04.2020	31.03.2021
4.	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	ಶ್ರೀ.ಜಗನ್ನಾಥ	01.04.2020	31.03.2021
		ಶ್ರೀಮತಿ.ವಿದ್ಯಾ.ಡಿ	01.04.2020	31.03.2021
5.	ನಗರ ಯೋಜಕರು	ಶ್ರೀಮತಿ. ಓ. ಜಾನಕಿ	01.04.2020	31.03.2021
		ಶ್ರೀ. ಮಹಂತೇಶ್	01.04.2020	31.03.2021
6.	ವಿಷಯ ನಿರ್ವಾಹಕರು	ಶ್ರೀಮತಿ. ಕೆ.ವಿ.ದಿವ್ಯ	01.04.2020	31.03.2021

4. ಹಿಂದಿನ ಸಾಲುಗಳ ಲೆಕ್ಕ ತನಿಖಾ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸಿರುವುದು:–

ಆನೇಕಲ್ ಯೋಜನಾ ಪ್ರಾಧಿಕಾರದ 2006–07 ರಿಂದ 2019–20ನೇ ಸಾಲಿನ ವರೆಗಿನ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ವಿವರಗಳು ಈ ಕೆಳಕಂಡಂತಿದ್ದು, ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಾವಳಿಗಳು 1965ರ ನಿಯಮ 27ರಂತೆ ಅನುಸರಣಾ ವರದಿಗಳನ್ನು ತಯಾರಿಸಿ ಅವುಗಳನ್ನು ಆಡಿಟ್ ಮಿನಿಟ್ ಪುಸ್ತಕದಲ್ಲಿ ದಾಖಲಿಸಿ ಸಕ್ಷಮ ಪ್ರಾಧಿಕಾರದ ಮೂಲಕ ಜಂಟಿ ನಿರ್ದೇಶಕರು ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಬೆಂಗಳೂರುಗೆ ಸಲ್ಲಿಸಬೇಕಾಗಿದ್ದು, ಕಂಡಿಕೆಗಳು ತೀರುವಳಿಯಾಗದೇ ಹಾಗೆಯೆ ಮುಂದುವರೆದಿರುತ್ತದೆ. ತೀರುವಳಿಯಾಗದೇ ಬಾಕಿ ಉಳಿದಿರುವ ಆಕ್ಷೇಪಣಾ ಮತ್ತು ವಸೂಲಾತಿ ಮೊತ್ತಗಳ ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ವರ್ಷ	ಆಕ್ಷೇಪಣೆ		ವಸೂಲಾತಿ		ತೀರುವಳಿ ಮೊತ್ತ				ಆಖೈರು ಶಿಲ್ಕು			
		ಕಂಡಿಕೆ	ಮೊತ್ತ	ಕಂಡಿಕೆ	ಮೊತ್ತ	ಕಂಡಿಕೆ	ಆಕ್ಷೇಪಣೆ	ವಸೂಲಾತಿ		ಕಂಡಿಕೆ	ಆಕ್ಷೇಪಣೆ	ಕಂಡಿಕೆ	ವಸೂಲಾತಿ
1.	2006–07	–	–	01	878	–	–	01	878	–	–	–	–
2.	2007–08	–	–	01	363	–	–	01	363	–	–	–	–
3.	2008–09	–	–	01	318	–	–	01	318	–	–	–	–
4.	2008–09	–	–	01	363	–	–	01	363	–	–	–	–
5.	2011–12	–	–	02	2195	–	–	02	2195	–	–	–	–
6.	2011–12	–	–	01	133386575	–	–	–	–	–	–	01	133386575
7.	2012–13	–	–	02	4599	–	–	02	4599	–	–	–	–
8.	2013–14	01	5457	–	–	–	–	–	–	01	5457	–	–
9.	2014–15	01	1340	–	–	–	–	––		01	1340	–	–
10.	2015–16	–	–	–	–	–	–	–	–	–	–	–	–
11.	2016–17	03	1416025243	02	44108	–	–	–	–	03	1416025243	02	44108
12	2017–18	03	2300090021	01	500404	–	––		–	03	2300090021	01	500404
13	2018–19	05	2110800510	–	–	–	–	–	–	05	2110800510	–	–
14	2019–20	05	1311187433	–	–	–	–	–	–	05	1311187433	–	–
	ಒಟ್ಟು	**18**	**7138110004**	**12**	**133939803**			**8**	**8716**	**18**	**7138110004**	**4**	**133931087**

5. ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆ:–

ಲೆಕ್ಕ ಪರಿಶೋಧನಾ ದಿನಾಂಕ: 22–04–2021ರಂದು ಕೆಳಕಂಡಂತೆ ಶಿಲ್ಕುಗಳು ಇದ್ದು, ಇದನ್ನು ಭೌತಿಕವಾಗಿ ಪರಿಶೀಲಿಸಲಾಗಿ ವಿವಿಧ ಶಿಲ್ಕುಗಳು ದಾಸ್ತಾನುನಲ್ಲಿದ್ದು ಪುಸ್ತಕದ ಆಖೈರು ಶಿಲ್ಕುಗೆ ತಾಳೆ ಇರುತ್ತದೆ.

1.	ಕೈ ನಗದು ಶಿಲ್ಕು	–
2.	ಅಂಚೇ ಚೀಟಿಗಳು	3990
3.	ರಸೀದಿ ಪುಸ್ತಕಗಳು	15 (ರಸೀದಿ ಪುಸ್ತಕ ಸಂಖ್ಯೆ 06 ರಿಂದ 20)
4.	ಹೂಡಿಕೆ ಪತ್ರಗಳು	07 ಪತ್ರಗಳು, ಒಟ್ಟು ಮೌಲ್ಯ ರೂ. 2116452377

6. ಆಯವ್ಯಯ ಮತ್ತು ಅನುಮೋದನೆ ವಿವರ:–

ಕೆಟಿಸಿಪಿ ಕಾಯ್ದೆ 1961ರ ಸೆಕ್ಷನ್ 68ಬಿ ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು 1965ರ ನಿಯಮ 22ರನ್ವಯ ಪ್ರತಿ ವರ್ಷದ ಜನವರಿ ಮಾಹೆಯೊಳಗಾಗಿ ಮುಂದಿನ ಸಾಲಿನ ಆಯವ್ಯಯವನ್ನು ಸಿದ್ಧಪಡಿಸಿ ಸಲ್ಲಿಸಬೇಕಾಗಿರುತ್ತದೆ. ಅದರಂತೆ ಸದರಿ ಆಯವ್ಯಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಅನುಮೋದನೆಯ ಪ್ರತಿ ಹಿಂತಿರುಗಿಸಿರುವುದಿಲ್ಲ. ಆದ್ದರಿಂದ ಆಯವ್ಯಯ ಅನುಮೋದನೆ ಪಡೆಯದೆ ವೆಚ್ಚ ಭರಿಸಿರುವುದು ನಿಯಮಬಾಹಿರವಾಗಿದ್ದು, ಗಂಭೀರವಾದ ನ್ಯೂನತೆಯಾಗಿದೆ. ಹಾಗು ಅನುಮೋದನೆ ಪಡೆಯದೆ ಭರಿಸಿರುವ ವೆಚ್ಚದ ಬಗ್ಗೆ ವರದಿಯಲ್ಲಿ ತೀವ್ರವಾಗಿ ಆಕ್ಷೇಪಿಸಿದೆ.

ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿದ ಅಂದಾಜು ಆಯವ್ಯಯದಂತೆ ನಿರೀಕ್ಷಿತ ಹಾಗೂ ಸಂಸ್ಥೆಯವರು ನೀಡಿದ ವಿವರಗಳಂತೆ ವಾಸ್ತವಿಕ ಅಂಕಿ ಅಂಶಗಳನ್ನು ಕೆಳಗೆ ನೀಡಲಾಗಿದೆ.

	ನಿರೀಕ್ಷಿತ		ವಾಸ್ತವಿಕ
	Ordinary section	**Capital section**	**Actuals**
1.4.2020ಕ್ಕೆ ಪ್ರಾರಂಭ ಶಿಲ್ಕು	503851701	2222813642	97287115
2020–21ರಲ್ಲಿ ಜಮೆ	136260000	1877995809	2279186746
ಒಟ್ಟು ರೂ.	640111701	4100809451	2376473861
2020–21ರಲ್ಲಿ ವೆಚ್ಚ	89790000	1961390000	2118095262
31.03.2021ಕ್ಕೆ ಆಖೈರು ಶಿಲ್ಕು	550321701	2139419451	258378599

ಮೇಲಿನಂತೆ ನಿರೀಕ್ಷಿತ Ordinary section ಹಾಗೂ Capital sectionಗಳ ಜಮಾ ಹಾಗೂ ಖರ್ಚುಗಳ ಅಂಕಿ ಅಂಶಗಳನ್ನು ಗಮನಿಸಿದಾಗ ಯಾವ ಮಾನದಂಡದ ಮೇಲೆ ಆಯವ್ಯಯ ಸಿದ್ಧಪಡಿಸಲಾಗಿದೆ ಎಂಬ ವಿವರ ತಿಳಿದು ಬಂದಿರುವುದಿಲ್ಲ. ಈ ಸಂಬಂಧ ವಿವರಣೆ ನೀಡುವುದು. ಅಲ್ಲದೇ ಇನ್ನು ಮುಂದೆ ಆಯವ್ಯಯ ಸಿದ್ಧಪಡಿಸುವಾಗ ಹಿಂದಿನ ಮೂರು ವರ್ಷಗಳ ಆದಾಯ ಮತ್ತು ವೆಚ್ಚಗಳ ಸರಾಸರಿಯನ್ನು ಗಣನೆಗೆ ತೆಗೆದುಕೊಂಡು ತಯಾರಿಸಲು ಕ್ರಮ ವಹಿಸುವುದು. 2020–21ನೇ ಸಾಲಿನ ಆಯ–ವ್ಯಯದ ವಿವರಗಳನ್ನು ಅನುಬಂಧ–01ರಲ್ಲಿ ಲಗತ್ತಿಸಿದೆ.

1. ವಾರ್ಷಿಕ ಲೆಕ್ಕಪತ್ರಗಳು:–

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರ ಪ್ರಕರಣ 68(ಸಿ)(1) ರಂತೆ ಪ್ರತಿ ಯೋಜನಾ ಪ್ರಾಧಿಕಾರವು ಅಢಾವೆ ಪತ್ರಿಕೆಯನ್ನು ಒಳಗೊಂಡಂತೆ ವಾರ್ಷಿಕ ಲೆಕ್ಕಗಳನ್ನು ನಿರ್ದಿಷ್ಟವಾಗಿ ನಿಗಧಿಗೊಳಿಸಿರುವ ನಮೂನೆಗಳಲ್ಲಿ ಸಿದ್ಧಪಡಿಸಬೇಕಾಗಿರುತ್ತದೆ. ಆನೇಕಲ್ ಯೋಜನಾ ಪ್ರಾಧಿಕಾರದಲ್ಲಿ ವಾರ್ಷಿಕ ಲೆಕ್ಕಪತ್ರಗಳನ್ನು ನಿಗಧಿತ ನಮೂನೆಯಲ್ಲಿ ನಿರ್ವಹಿಸಿರುವುದಿಲ್ಲ. 2020–21ನೇ ಸಾಲಿಗೆ ಸಂಬಂಧಸಿದಂತೆ ನಾಗರಿಕ ಸೌಲಭ್ಯ ನಿವೇಶನಗಳು ಹಾಗು ಇತರೆ ಆಸ್ತಿಗಳ ಆರಂಭಿಕ ಶಿಲ್ಕು ಪಟ್ಟಿ (O.B.S) ತಯಾರಿಸಿ ಸಮತೋಲನ ಪಟ್ಟಿಯಲ್ಲಿ ಅಳವಡಿಸಿಕೊಂಡು ಸರ್ಕಾರ ನಿರ್ಧಿಷ್ಟಪಡಿಸಿರುವ ಸವಕಳಿಯೊಂದಿಗೆ ಕಳೆದು ಮೌಲ್ಯವನ್ನು ನಿರ್ಧಿರಿಸಬೇಕಾಗಿದ್ದು,. 2020–21ನೇ ಸಾಲಿಗೆ ನಿರ್ವಹಿಸಿ ಲೆಕ್ಕ ತನಿಖೆಗೆ ಸಲ್ಲಿಸಿರುವುದಿಲ್ಲ ಹಾಗು 2020–21ನೇ ಸಾಲಿನಲ್ಲಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿರುವ ನಾಗರೀಕ ಸೌಲಭ್ಯ ನಿವೇಶನಗಳಿಗೆ ಸಂಬಂಧಿಸಿದಂತೆ ಸರ್ಕಾರದ ಮಾರುಕಟ್ಟೆ ದರದನ್ವಯ ಮೊತ್ತವನ್ನು ನಮೂದಿಸಬೇಕಾಗಿದ್ದು, ಸದರಿ ವಹಿಯನ್ನು ಲೆಕ್ಕ ತನಿಖೆಗೆ ಸಲ್ಲಿಸಲಾಗಿದ್ದು, ಮಾರುಕಟ್ಟೆ ದರವನ್ನು ನಮೂದಿಸಲಾಗಿರುವುದಿಲ್ಲ. ಮೇಲ್ಕಂಡ ಅಂಶಗಳನ್ನೊಳಗೊಂಡಂತೆ ಹಾಗು ಸರ್ಕಾರದ ಆದೇಶದನ್ವಯ ಸನ್ನದು ಲೆಕ್ಕಿಗರಿಂದ ವಾರ್ಷಿಕ ಜಮಾ ಮತ್ತು ಖರ್ಚು ಸಮತೋಲನ ಪಟ್ಟಿಯನ್ನು ತಯಾರಿಸಿ ಈ ಕಛೆರಿಗೆ ರವನಿಸಲು ತಿಳಿಸಿದೆ. ಯೋಜನಾ ಪ್ರಾಧಿಕಾರವು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಒದಗಿಸಿದ ನಗದು ಪುಸ್ತಕ, ಬ್ಯಾಂಕ್ ಪಾಸ್‌ಶೀಟ್‌ಗಳು, ಪೂರಕವಹಿಗಳು ಮತ್ತು ಪ್ರಾಧಿಕಾರದ ಮಾಸಿಕ ಸಭೆಗಳಿಗೆ ಸಿದ್ಧಪಡಿಸಿ ಸಲ್ಲಿಸಿದ್ದ ಮಾಸಿಕ ಜಮಾ ಖರ್ಚು ತಃಖ್ತೆಗಳನ್ನು ಆಧರಿಸಿ 2020–21ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಳ್ಳಲಾಗಿದೆ.

8. ಸಮಗ್ರ ಆರ್ಥಿಕ ಪರಿಸ್ಥಿತಿ ವಿವರ:–

ಲೆಕ್ಕ ಖಾತೆವಾರು 2020–21ನೇ ಸಾಲಿನ ಆರ್ಥಿಕ ಪರಿಸ್ಥಿತಿ ಈ ಕೆಳಕಂಡಂತಿದೆ.

ವಿವರ	ಒಟ್ಟು
1.4.2020ಕ್ಕೆ ಪ್ರಾರಂಭ ಶಿಲ್ಕು	97287115
2020–21 ರಲ್ಲಿ ಜಮೆ	2279498886
ಒಟ್ಟು ರೂ.	2376786001
2020–21ರಲ್ಲಿ ವೆಚ್ಚ	2118095262
31.03.2021ಕ್ಕೆ ನಗದು ಪುಸ್ತಕ ಆಖ್ಯೈರು ಶಿಲ್ಕು	258690739
31.03.2021ಕ್ಕೆ ಬ್ಯಾಂಕ್ ಪಾಸ್ ಪುಸ್ತಕ ಆಖ್ಯೈರು ಶಿಲ್ಕು	258378599
ವ್ಯತ್ಯಾಸದ ಮೊತ್ತ	**312140**

ವ್ಯತ್ಯಾಸದ ಮೊತ್ತಕ್ಕೆ ಕಾರಣವಾದ ಧನಾದೇಶಗಳ ವಿವರಗಳು

ಕ್ರ.ಸಂ	ಚೆಕ್ ಸಂಖ್ಯೆ	ಮೊತ್ತ
1.	468685	11970
2.	468683	2000
3.	468684	11970
4.	907656	51300
5.	907652	10500
6.	907654	20600
7.	907653	20600
8.	907657	156200
9.	907655	27000

	ಒಟ್ಟು	**312140**

ಪ್ರಾಧಿಕಾರವು 2020–21ನೇ ಸಾಲಿನಲ್ಲಿ ಬ್ಯಾಂಕ್ ವಾರು ನಡೆಸಿರುವ ವಿವರಗಳನ್ನು ಅನುಬಂಧ–02ರಲ್ಲಿ ಅಡಕವಿರಿಸಲಾಗಿದೆ.

9. ನಿಗಧಿತ ನಮೂನೆಯಲ್ಲಿ ಸಾಮಾನ್ಯ ನಗದು ವಹಿಯನ್ನು ನಿರ್ವಹಿಸದಿರುವುದು:–

ಪ್ರಾಧಿಕಾರವು ಹೊಂದಿರುವ ಬ್ಯಾಂಕ್ ಖಾತೆಗಳವಾರು ಕ್ರೋಢೀಕೃತ ಆರ್ಥಿಕ ವ್ಯವಹಾರವನ್ನು ದಾಖಲಿಸಿ ನಗದು ಪುಸ್ತಕವನ್ನು ನಿರ್ವಹಿಸಿರುವುದು ಕಂಡುಬಂದಿರುತ್ತದೆ. 2020–21ನೇ ಸಾಲಿನಲ್ಲಿ ನಡೆಸಲಾಗಿರುವ ಆರ್ಥಿಕ ವ್ಯವಹಾರಗಳನ್ನು ಬ್ಯಾಂಕ್ ಖಾತೆವಾರು ನಿರ್ವಹಿಸಿರುವ ನಗದು ಪುಸ್ತಕಗಳಲ್ಲಿನ ಆರ್ಥಿಕ ವ್ಯವಹಾರಗಳನ್ನು ಆಧರಿಸಿ ಪರಿಶೀಲಿಸಲಾಗಿರುತ್ತದೆ. ಸದರಿ ಸಂಸ್ಥೆಯ ನಗದು ಪುಸ್ತಕವನ್ನು ಸರ್ಕಾರದ ಆದೇಶ ಸಂಖ್ಯೆ ಯುಡಿಡಿ 16 ಸಿಎಆರ್ 2006 ದಿನಾಂಕ 21–02–2006ರ ಪ್ರಕಾರ ದಿನಾಂಕ 1–4–2006ರಿಂದ ದ್ವಿ–ನಮೂದು ಪದ್ಧತಿಯಲ್ಲಿ(ಡಬಲ್ ಎಂಟ್ರಿ) ನಿರ್ವಹಿಸಬೇಕಾಗಿದ್ದು, ಇನ್ನುಮುಂದೆ ನಿರ್ದೇಶನದಂತೆ ನಿರ್ವಹಿಸಲು ತಿಳಿಸಿದೆ.

ಪ್ರಾಧಿಕಾರದಲ್ಲಿ ಕರ್ನಾಟಕ ಆರ್ಥಿಕ ಸಂಹಿತೆ 328 ರಿಂದ 382ಎ ವರೆಗಿನ ಅನುಚ್ಛೇದಗಳಂತೆ ಸರ್ಕಾರಿ ಸ್ವಾಯುತ್ತ ಸಂಸ್ಥೆಗಳ ಲೆಕ್ಕಗಳನ್ನು ನಿಗಧಿತ ಸಾಮಾನ್ಯ ನಗದು ವಹಿಯಲ್ಲಿ ಪ್ರತಿ ದಿನದ ಜಮೆ ಮತ್ತು ವೆಚ್ಚಗಳನ್ನು ನಮೂದಿಸಿ ಪ್ರತಿ ಮಾಹೆಯ ಅಂತ್ಯಕ್ಕೆ ಆಯಾ ಮಾಹೆಯ ವಹಿವಾಟಿನ ಪ್ರತಿ ನಮೂದುಗಳನ್ನು ಬ್ಯಾಂಕ್ ಪಾಸು ಪುಸ್ತಕದೊಂದಿಗೆ ಲೆಕ್ಕ ಸಮನ್ವಯಗೊಳಿಸಿ ವ್ಯತ್ಯಾಸ ಬಂದಲ್ಲಿ ಕಾರಣಗಳನ್ನು ನಮೂದಿಸಿ ದೃಢೀಕರಿಸಬೇಕಾಗಿರುತ್ತದೆ. ಆದರೆ ಪ್ರಾಧಿಕಾರದಲ್ಲಿ ಇದಕ್ಕೆ ಬದಲಾಗಿ ಒಂದು ಸಾಮಾನ್ಯ ವಹಿಯಲ್ಲಿ ದಿನ ನಿತ್ಯದ ವಹಿವಾಟನ್ನು ನಮೂದಿಸಿ ನಿರ್ವಹಿಸಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಹಿಂದಿನ ವರದಿಯಲ್ಲಿಯೂ ಪ್ರಸ್ತಾಪಿಸಲಾಗಿದ್ದರೂ ಯಾವುದೇ ಕ್ರಮವಹಿಸಿರುವುದಿಲ್ಲ. ನಿಯಮ ರೀತ್ಯ ಅಗತ್ಯ ಕ್ರಮವಹಿಸಲು ತಿಳಿಸಿದೆ.

10. ಅನುದಾನಗಳ ವಿವರ:–

ಈ ಯೋಜನಾ ಪ್ರಾಧಿಕಾರಕ್ಕೆ 2020–21ರ ಸಾಲಿನಲ್ಲಿ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲವೆಂದು ತಿಳಿಸಿದ್ದು, ಅನುದಾನದ ವಹಿಯನ್ನು ನಿರ್ವಹಿಸಿರುವುದಿಲ್ಲ.

11. ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿ:–

2020–21ರ ಸಾಲಿನಲ್ಲಿ ಪ್ರಾಧಿಕಾರದಲ್ಲಿ ಸ್ವೀಕರಿಸಿದ ಜಮಾ ಹಾಗೂ ಭರಿಸಲಾದ ವೆಚ್ಚಗಳಿಗೆ ಸಂಬಂಧಿಸಿದಂತೆ ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿಯನ್ನು ನಿರ್ವಹಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾಗಿರುವುದಿಲ್ಲ. ಆದರೆ ಪ್ರಾಧಿಕಾರದವರು ನೀಡಿದ ವಿವರಗಳಂತೆ ವರ್ಗೀಕೃತ ಜಮಾ ಮತ್ತು ಖರ್ಚಿನ ವಿವರಗಳನ್ನು **ಅನುಬಂಧ – 3ರಲ್ಲಿ** ವರದಿಗೆ ಲಗತ್ತಿಸಲಾಗಿದೆ.

12. ವಾರ್ಷಿಕ ಆಡಳಿತ ವರದಿ ವಿವರ:–

ಕರ್ನಾಟಕ ಪಟ್ಟಣ ಮತ್ತು ನಗರ ಯೋಜನಾ ಕಾಯ್ದೆ 1961ರ ಸೆಕ್ಷನ್ 68ಡಿ ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಗಳು 1965ರ ನಿಯಮ 29ರಂತೆ ನಮೂನೆ–5ರಲ್ಲಿ ಜಮಾ ಖರ್ಚುಗಳ ನಮೂನೆಯೊಡನೆ ವಾರ್ಷಿಕ ಆಡಳಿತ ವರದಿಯನ್ನು ತಯಾರಿಸಿ ಸರ್ಕಾರಕ್ಕೆ ಜೂನ್ 30ರೊಳಗಾಗಿ ಸಲ್ಲಿಸಬೇಕಾಗಿರುತ್ತದೆ. ಲೆಕ್ಕ ವಿಚಾರಣಾ ಪತ್ರ ಸಂಖ್ಯೆ:01/2021–22 ದಿನಾಂಕ:22.04.2021ರಲ್ಲಿ ಜಾರಿಮಾಡಿ 2020–21ನೇ ಸಾಲಿನ ವಾರ್ಷಿಕ ವರದಿಯನ್ನು ಸಲ್ಲಿಸಿರುವ ಬಗ್ಗೆ ವಿವರಣೆ ಕೋರಲಾಗಿತ್ತು. ಲೆಕ್ಕ ಪರಿಶೋಧನೆ ಮುಕ್ತಾಯ ದಿನಾಂಕದವರೆಗೂ ವಿವರಗಳನ್ನು ಹಾಜರುಪಡಿಸಿರುವುದಿಲ್ಲ.

13. ಅಂಚೆ ಚೀಟಿಗಳ ವಹಿವಾಟಿನ ವಿವರ:–

2020–21ನೇ ಸಾಲಿನಲ್ಲಿ ಅಂಚೆ ಚೀಟಿಗಳ ವಹಿವಾಟಿನ ಬಗ್ಗೆ ವಹಿ ನಿರ್ವಹಿಸಿದ್ದು ಅದರಂತೆ ವಹಿವಾಟು ಈ ಕೆಳಕಂಡಂತಿದೆ.

1.4.2020ಕ್ಕೆ ಪ್ರಾರಂಭ ಶಿಲ್ಕು	3882
2020–21ರಲ್ಲಿ ಸ್ವೀಕೃತಿ	10000
ಒಟ್ಟು ರೂ.	13882
2020–21ರಲ್ಲಿ ಉಪಯೋಗ	9578
31.03.20ಕ್ಕೆ ಆಖೈರು ಶಿಲ್ಕು	4304

14. ರಶೀದಿ ಪುಸ್ತಕಗಳ ವಹಿವಾಟಿನ ವಿವರ:–

2020–21ನೇ ಸಾಲಿನಲ್ಲಿ ರಶೀದಿ ಪುಸ್ತಕಗಳ ವಹಿವಾಟು ದಾಸ್ತಾನು ವಹಿಯಂತೆ ಈ ಕೆಳಕಂಡಂತೆ ನೀಡಲಾಗಿದೆ.

1.4.2020ಕ್ಕೆ ಪ್ರಾರಂಭ ಶಿಲ್ಕು	20
2020–21ರಲ್ಲಿ ಸ್ವೀಕೃತಿ	00
ಒಟ್ಟು	20
2020–21ರಲ್ಲಿ ಉಪಯೋಗ	18
31.03.20ಕ್ಕೆ ಆಖೈರು ಶಿಲ್ಕು	02

ಆಖೈರು ಶಿಲ್ಕುನ ವಿವರಗಳು (41119 – 41120)

ಪ್ರಸಕ್ತ ಸಾಲು 2020–21ರಲ್ಲಿ ಹೊಸದಾಗಿ ರಸೀದಿ ಪುಸ್ತಕಗಳನ್ನು ಖಾಸಗಿ ಮುದ್ರಕರಿಂದ ಪ್ರಾಧಿಕಾರವು ಮುದ್ರಣ ಮಾಡಿಸಿಕೊಂಡಿರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದಿದ್ದು, ಪ್ರತಿ ಪುಸ್ತಕಗಳು 50 ರಸೀದಿಗಳನ್ನು ಒಳಗೊಂಡಿದೆ. ಪ್ರಸಕ್ತ ಸಾಲಿನ ಉಪಯೋಗದ ವಿವರಗಳು ಈ ಕೆಳಕಂಡಂತಿದೆ:–

1.4.2020ಕ್ಕೆ ಪ್ರಾರಂಭ ಶಿಲ್ಕು	00
2020–21ರಲ್ಲಿ ಸ್ವೀಕೃತಿ	20
ಒಟ್ಟು	**20**
2020–21ರಲ್ಲಿ ಉಪಯೋಗ	05
31.03.20ಕ್ಕೆ ಆಖೈರು ಶಿಲ್ಕು	15
ಆಖೈರು ಶಿಲ್ಕುಗೆ ವಿವರಗಳು 06 ರಿಂದ 20	

15. ರಶೀದಿ ಪುಸ್ತಕಗಳ ಉಪಯೋಗದ ವಿವರ:–

2020–21ನೇ ಸಾಲಿನಲ್ಲಿ ಉಪಯೋಗಿಸಿದ ರಶೀದಿ ಪುಸ್ತಕಗಳ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ರಶೀದಿ ಪುಸ್ತಕದ ಸಂಖ್ಯೆ	ರಸೀದಿ ಸಂಖ್ಯೆ		ಷರಾ
		ಯಿಂದ	ವರೆಗೆ	
1.	37536	3753516	3753575	ಹಿಂದಿನ ಸಾಲಿನದ್ದು, ಭಾಗಶ:
2.	37538	3753774	3753800	ಹಿಂದಿನ ಸಾಲಿನದ್ದು, ಪೂರ್ಣ.

3.	37539	3753811	3753900	ಹಿಂದಿನ ಸಾಲಿನದ್ದು, ಪೂರ್ಣ.
4.	37540	3753911	3754000	ಹಿಂದಿನ ಸಾಲಿನದ್ದು, ಪೂರ್ಣ.
5.	37736	3773511	3773600	ಹಿಂದಿನ ಸಾಲಿನದ್ದು, ಪೂರ್ಣ.
6.	37737	3773611	3773700	ಹಿಂದಿನ ಸಾಲಿನದ್ದು, ಪೂರ್ಣ.
7.	41101	4113001	4113100	ಪ್ರಸಕ್ತ ಸಾಲಿನದ್ದು, ಪೂರ್ಣ.
8.	41102	4113101	4113200	ಪ್ರಸಕ್ತ ಸಾಲಿನದ್ದು, ಪೂರ್ಣ.
9.	41103	4113201	4113300	ಪ್ರಸಕ್ತ ಸಾಲಿನದ್ದು, ಪೂರ್ಣ.
10.	41104	4113301	4113400	ಪ್ರಸಕ್ತ ಸಾಲಿನದ್ದು, ಪೂರ್ಣ.
11.	41105	4113401	4113500	ಪ್ರಸಕ್ತ ಸಾಲಿನದ್ದು, ಪೂರ್ಣ.
12.	41106	4113501	4113600	ಪ್ರಸಕ್ತ ಸಾಲಿನದ್ದು, ಪೂರ್ಣ.
13.	41107	4113601	4113700	ಪ್ರಸಕ್ತ ಸಾಲಿನದ್ದು, ಪೂರ್ಣ.
14.	41108	4113701	4113800	ಪ್ರಸಕ್ತ ಸಾಲಿನದ್ದು, ಪೂರ್ಣ.
15.	41109	4113801	4113900	ಪ್ರಸಕ್ತ ಸಾಲಿನದ್ದು, ಪೂರ್ಣ.
16.	41110	4113901	4114000	ಪ್ರಸಕ್ತ ಸಾಲಿನದ್ದು, ಪೂರ್ಣ.
17.	41111	4111001	4111100	ಪ್ರಸಕ್ತ ಸಾಲಿನದ್ದು, ಪೂರ್ಣ.
18.	41112	4111101	4111200	ಪ್ರಸಕ್ತ ಸಾಲಿನದ್ದು, ಪೂರ್ಣ.
19.	41113	4111201	4111300	ಪ್ರಸಕ್ತ ಸಾಲಿನದ್ದು, ಪೂರ್ಣ.
20.	41114	4111301	4111400	ಪ್ರಸಕ್ತ ಸಾಲಿನದ್ದು, ಪೂರ್ಣ.
21.	41115	4111401	4111500	ಪ್ರಸಕ್ತ ಸಾಲಿನದ್ದು, ಪೂರ್ಣ.
22.	41116	4111501	4111600	ಪ್ರಸಕ್ತ ಸಾಲಿನದ್ದು, ಪೂರ್ಣ.
23.	41117	4111601	4111700	ಪ್ರಸಕ್ತ ಸಾಲಿನದ್ದು, ಪೂರ್ಣ.
24.	41118	4111701	4111800	ಪ್ರಸಕ್ತ ಸಾಲಿನದ್ದು, ಪೂರ್ಣ.
25.	01 ರಿಂದ 04	001	200	ಪ್ರಸಕ್ತ ಸಾಲಿನದ್ದು, ಪೂರ್ಣ.

2020–21ನೇ ಸಾಲಿನಲ್ಲಿ ಈ ಕೆಳಕಂಡ ರಶೀದಿ ಪುಸ್ತಕಗಳನ್ನು ಭಾಗಶಃ ಪರಿಶೀಲಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ರಶೀದಿ ಪುಸ್ತಕದ ಸಂಖ್ಯೆ	ಉಪಯೋಗಿಸಿದ ಕೊನೆ ರಸೀದಿ ಸಂಖ್ಯೆ	ದಿನಾಂಕ
1.	9974	924874	26–09–2019
2.	05	236	30–03–2021

ಭಾಗಶಃ ಪರಿಶೀಲಿಸಲಾಗಿರುವ ರಸೀದಿ ಪುಸ್ತಕಗಳನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ತಿಳಿಸಿದೆ.

16. ಭೂ ಉಪಯೋಗ ಬದಲಾವಣೆ ಅರ್ಜಿ ನಮೂನೆಗಳ ವಹಿವಾಟಿನ ವಿವರ:–

2020–21ನೇ ಸಾಲಿನಲ್ಲಿ ಭೂಉಪಯೋಗ ಬದಲಾವಣೆ ಬಗ್ಗೆ ಅರ್ಜಿ ನಮೂನೆಗಳು (ರೂ.100/–) ವಹಿವಾಟಿನ ವಿವರ ಈ ಕೆಳಕಂಡಂತಿದೆ.

1.4.2020ಕ್ಕೆ ಪ್ರಾರಂಭ ಉಳಿಕೆ	1568
2020–21ರಲ್ಲಿ ಸ್ವೀಕೃತಿ	–
ಒಟ್ಟು	1568
2020–21 ರಲ್ಲಿ ಮಾರಾಟ	66
31.03.2021ಕ್ಕೆ ಆಖೈರು ಶಿಲ್ಕು	1502

17. ರಶೀದಿಗಳ ಮೂಲಕ ವಸೂಲಿಸಿರುವ ಮೊತ್ತವನ್ನು ಪ್ರಾಧಿಕಾರದ ನಿಧಿಗೆ ಜಮೆ ಮಾಡಿರುವ ವಿವರ:–

ಆನೇಕಲ್ ಯೋಜನಾ ಪ್ರಾಧಿಕಾರದಲ್ಲಿ 2020–21ನೇ ಸಾಲಿನಲ್ಲಿ ರಶೀದಿ ಪುಸ್ತಕಗಳು, ಬ್ಯಾಂಕ್ ಚಲನ್, ಮತ್ತು ಪಾಸ್‌ಶೀಟ್‌ಗಳನ್ನು ಪರಿಶೀಲಿಸಲಾಗಿ, ಭೂ ಬದಲಾವಣೆ ಅರ್ಜಿ ಶುಲ್ಕ, ಸಿ.ಡಿ, ಜಡ್.ಆರ್, ಮತ್ತು ಮಹಾಯೋಜನೆ ನಕ್ಷೆ ಮಾರಾಟ ಶುಲ್ಕಗಳನ್ನು ಒಟ್ಟಾರೆಯಾಗಿ ರೂ.979900/–ಗಳನ್ನು ವಸೂಲಿಸಿದ್ದು ಪ್ರಾಧಿಕಾರದ ನಿಧಿಗೆ ಜಮೆ ಮಾಡಲಾಗಿರುತ್ತದೆ.

ಮುಂದುವರೆದು, ಆನೇಕಲ್ ಯೋಜನಾ ಪ್ರಾಧಿಕಾರವು 2020–21ನೇ ಸಾಲಿನಲ್ಲಿ ಸಂಗ್ರಹಿಸಿದ ವಿವಿಧ ರೀತಿಯ ಕರಗಳ ಮೊತ್ತವು ಆಯಾ ಸಂಬಂಧಪಟ್ಟ ಕರಗಳ ಬ್ಯಾಂಕ್ ಖಾತೆಗೆ ಜಮೆಯಾಗದೆ ಸಂಸ್ಥೆಯ ಇತರೆ ಕರಗಳ ಬ್ಯಾಂಕ್ ಖಾತೆಗೆ ಜಮೆಯಾಗಿರುವುದು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಿದೆ. ಇದರಿಂದ ಪ್ರತ್ಯೇಕ ಕರಗಳ ಬ್ಯಾಂಕ್ ಖಾತೆಗೆ ಜಮೆಯಾದ ಮೊತ್ತಕ್ಕೂ ರಸೀದಿಗಳಲ್ಲಿ ನಮೂದಿಸಿರುವ ಒಟ್ಟು ಮೊತ್ತಕ್ಕೂ ತಾಳೆಯಾಗಿರುವುದಿಲ್ಲ. ಇದು ಗಂಭೀರ ತರದ ನ್ಯೂನ್ಯತೆಯಾಗಿದ್ದು, ಇದರ ಸಂಬಂಧ, ಆಡಳಿತ ಮಂಡಳಿಯು, ಆಯಾ ಸಂಬಂಧಪಟ್ಟ ಕರಗಳ ಮೊತ್ತ ಪ್ರತ್ಯೇಕ ಖಾತೆಗಳಿಗೇ ಜಮೆಯಾಗುವುದರ ಬಗ್ಗೆ ಸೂಕ್ತ ಕ್ರಮ ವಹಿಸುವುದು ಎಂದು ವರದಿ ಅಭಿಪ್ರಾಯಿಸಿದೆ.

18. ಸಿ.ಡಿ. ಮತ್ತು ಮ್ಯಾಪ್‌ಗಳ ದಾಸ್ತಾನು ವಹಿ ಹಾಜರುಪಡಿಸದಿರುವ ವಿವರ:–

2020–21ನೇ ಸಾಲಿನಲ್ಲಿ ಸಿಡಿ, ಜೆಡ್‌ಆರ್ ಮತ್ತು ವಲಯ ನಕ್ಷೆಗಳನ್ನು ಮುದ್ರಿಸಿ ಖರೀದಿಸಿ ವಿತರಿಸಿರುವುದು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾದ ದಾಖಲಾತಿಗಳಿಂದ ಕಂಡುಬಂದಿರುತ್ತದೆ. ಆದರೆ ಪ್ರಸಕ್ತ ಸಾಲಿನಲ್ಲಿ ಎಷ್ಟು ಸಿಡಿ, ಜೆಡ್‌ಆರ್ ಮತ್ತು ವಲಯ ನಕ್ಷೆಗಳನ್ನು ಮುದ್ರಿಸಲಾಗಿರುವ, ಮಾರಾಟ ಮಾಡಲಾಗಿದ್ದ ಹಾಗೂ ಉಳಿಕೆ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ಕ್ರ.ಸಂ.	ವಿವರ	ಸಿಡಿ	ವಲಯ ನಿಯಮಾವಳಿ ಪುಸ್ತಕ	ನಕ್ಷೆ
1.	ಪ್ರಾರಂಭಿಕ	0	18	06
2.	ಖರೀದಿ	–	–	–
	ಒಟ್ಟು	0	18	06
3.	ಮಾರಾಟ	–	–	–
4.	ಬಾಕಿ	0	18	06

ವರ್ಷಾಂತ್ಯಕ್ಕೆ ಬಾಕಿಯಿರುವ ದಾಸ್ತಾನು ವಿತರಣೆಯ ಘೋಷ್ವಾರೆಯನ್ನು ಹಾಕಿ ಕಛೇರಿಯ ಮುಖ್ಯಸ್ಥರಿಂದ ದೃಢೀಕರಿಸಿ ಹಾಜರುಪಡಿಸಲು ಸೂಚಿಸಿದೆ.

19. ಹಣ ಸಂದಾಯದ ಚಲನ್‌ಗಳ ಪರಿಶೀಲನೆ ಬಗ್ಗೆ:–

2020–21ನೇ ಸಾಲಿನಲ್ಲಿ ಯೋಜನ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಬ್ಯಾಂಕ್ ಚಲನ್‌ಗಳ ಮಾಹೆಯನ ಹಣ ಸಂದಾಯದ ಚಲನ್‌ಗಳನ್ನು ಪರಿಶೀಲಿಸಿದಾಗ ಚಲನ್‌ಗಳ ದಿನಾಂಕವನ್ನು ಒಂದು ವಹಿಯಲ್ಲಿ ನಮೂದಿಸಲಾಗುತ್ತಿದ್ದು ಸದರಿ ಚಲನ್‌ಗಳನ್ನು ಯಾವ ದಿನಾಂಕಕ್ಕೆ ಬ್ಯಾಂಕಿನ ಖಾತೆಗೆ ಜಮೆಮಾಡಲಾಗಿದೆ ಎಂಬ ಬಗ್ಗೆ (ಡಿ.ಡಿ ಹಾಗೂ ಚೆಕ್ ನಗಧೀಕರಣ ವಹಿಯನ್ನು) ದಿನಾಂಕವನ್ನು ನಮೂದಿಸಲಾಗುತ್ತಿದ್ದು ಹಾಗೂ ಪ್ರಾಧಿಕಾರದಿಂದ ಸ್ವೀಕರಿಸುವ ವಿವಿಧ ರೀತಿಯ ಶಿಲ್ಕುಗಳಿಗೆ ಸಂಬಂಧಿಸಿದ ಡಿ.ಡಿ.ಗಳು ವಿಳಂಬವಾಗಿ ಖಾತೆಗೆ ಜಮೆ ಆಗುತ್ತಿದ್ದು, ಈ ಬಗ್ಗೆ ಆಗ್ಗಿಂದಾಗ್ಗೆ ಅಗತ್ಯ ಕ್ರಮವಹಿಸಿ ಬ್ಯಾಂಕ್‌ನೊಂದಿಗೆ ಲೆಕ್ಕಸಮನ್ವಯ ಮಾಡಿಕೊಂಡು ಸದರಿ ವಹಿಯನ್ನು ನಿಗದಿತ ನಮೂನೆಯಲ್ಲಿ ನಿರ್ವಹಿಸಲು ಅಗತ್ಯ ಕ್ರಮ ವಹಿಸಲು ತಿಳಿಸಲಾಗಿದೆ.

20. ಸಂಸ್ಥೆಯ ವತಿಯಿಂದ ನಿಶ್ಚಿತ ಠೇವಣಿಯಲ್ಲಿನ ಹೂಡಿಕೆಗಳ ವಿವರ:–

ಪ್ರಾಧಿಕಾರವು ಹೂಡಿಕೆಗಳ ವಹಿಯನ್ನು ನಿಗಧಿತ ನಮೂನೆಯಲ್ಲಿ ನಿರ್ವಹಿಸಿರುವುದಿಲ್ಲ. 2020–21ನೇ ಸಾಲಿನಲ್ಲಿ ಲಭ್ಯವಿದ್ದ ಹೂಡಿಕೆ ವಹಿಯನ್ನು ಹಾಗೂ ಹೂಡಿಕೆ ಪತ್ರಗಳನ್ನು ಪರಿಶೀಲಿಸಲಾಗಿ ವಿವಿಧ ಒಟ್ಟಾರೆ ಹೂಡಿಕೆ ಮೊತ್ತ ರೂ. 2042973000/ ಗಳಾಗಿರುತ್ತದೆ. 2020–21ನೇ ಸಾಲಿಗೆ ಹೂಡಿಕೆ ಮಾಡಿರುವ ಮೊತ್ತ, ಹಿಂದಿನ ಸಾಲಿನ ಹೂಡಿಕೆ ಪರಿಪಕ್ವ ಮೊತ್ತ ಹಾಗೂ 2020–21ನೇ ಸಾಲಿನ ಅಂತ್ಯಕ್ಕೆ ಹೂಡಿಕೆ ಮೊತ್ತದ ಉಳಿಕೆ ವಿವರಗಳು ಕೆಳಕಂಡಂತೆ ಕಂಡು ಬರುತ್ತದೆ.

ವಿವರ	ಉತ್ತಮತೆ ಶುಲ್ಕ ಖಾತೆಯಿಂದ ಹೂಡಿಕೆ	ಕೆರೆಗಳ ಸಂರಕ್ಷಣೆ ಖಾತೆಯಿಂದ ಹೂಡಿಕೆ	ಒಟ್ಟು ಮೊತ್ತ
ದಿ: 01–04–2020ಕ್ಕೆ ಪ್ರಾರಂಭಿಕ ಶಿಲ್ಕು (ಹೂಡಿಕೆ+ಬಡ್ಡಿ)	906121022	955339894	1861460916
2020–21ರಲ್ಲಿ ನಗದೀಕರಿಸಿದ ಮೊತ್ತ (ಹೂಡಿಕೆ+ಬಡ್ಡಿ)	902369962	952335159	1854705121
ವ್ಯತ್ಯಾಸ	3751060	3004735	6755795
2020–21ರ ಹೂಡಿಕೆಗಳು	1010000000	1032973000	2042973000
ದಿ: 31–03–2021ಕ್ಕೆ ಅಖೈರು ಶಿಲ್ಕು ಹೂಡಿಕೆ (ಬಡ್ಡಿ)	1010000000 (36274181)	1032973000 (37205196)	2042973000 (73479377)

ಸದರಿ ಠೇವಣಿಗಳಿಗೆ ಸಂಬಂಧಪಟ್ಟಂತೆ, ಬ್ಯಾಂಕ್ ವಿವರ, ಹೂಡಿಕೆ ದಿನಾಂಕ, ಪರಿಪಕ್ವತೆ ದಿನಾಂಕ, ಬಡ್ಡಿದರ, ಹೂಡಿಕೆ ಮೊತ್ತ ಹಾಗೂ ಪರಿಪಕ್ವತೆ ಮೊತ್ತಗಳನ್ನೊಳಗೊಂಡ ವಿವರಗಳು ಮತ್ತು ಸಂಬಂಧಪಟ್ಟ ಬ್ಯಾಂಕ್‌ನಿಂದ ಹೂಡಿಕೆಯ ಬಗ್ಗೆ ಖಾತರಿ ಪತ್ರವನ್ನು **ಅನುಬಂಧ– 04**ರಲ್ಲಿ ತೋರಿಸಿದ್ದು, ವರದಿಗೆ ಲಗತ್ತಿಸಿದೆ.

ಪ್ರಸ್ತಕ ಸಾಲಿನಲ್ಲಿ ಎಲ್ಲಾ ಠೇವಣಿಗಳನ್ನು ನವೀಕರಿಸಲಾಗಿದ್ದು ಠೇವಣಿಯು ಪಕ್ವವಾದ ನಂತರ ಹಿಂಪಡೆದು ನಗದು ಪುಸ್ತಕ ಹಾಗೂ ಠೇವಣಿ ಹೂಡಿಕೆ ವಹಿಯಲ್ಲಿ ಪರಿಪಕ್ವತೆಯ ವಿವರಗಳನ್ನು ನಮೂದಿಸಿ, ನಂತರ ಬೇರೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸ್ಪರ್ಧಾತ್ಮಕ ಬಡ್ಡಿದರಗಳ ಪಟ್ಟಿಯನ್ನು ಪಡೆದು, ಗರಿಷ್ಠ ಬಡ್ಡಿದರ ನೀಡುವ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಮರು ಹೂಡಿಕೆ ಮಾಡಲಾಗಿರುತ್ತದೆ ಎನ್ನುವುದನ್ನು ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲಾಗಿರುತ್ತದೆ. ಹೂಡಿಕೆ ಪತ್ರಗಳ ಬಗ್ಗೆ ಆಗಿಂದಾಗ್ಗೆ ಸಂಬಂಧಿಸಿದ ಬ್ಯಾಂಕ್‌ಗಳಿಂದ ಖಾತ್ರಿ ಧೃಢೀಕರಣ ಪತ್ರ ಪಡೆಯುವಲ್ಲಿ ಕ್ರಮವಹಿಸುವುದು ಮತ್ತು ಹೂಡಿಕೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ:FD38:TAR2018 **ದಿನಾಂಕ: 27.08.2018** ಮತ್ತು FD 8 TAR **2020 ದಿನಾಂಕ: 12.03.2020**ರಂತೆ ಆನ್‌ಲೈನ್ ಮೂಲಕ ಬಡ್ಡಿದರಕ್ಕೆ ಟೆಂಡರ್ ಕರೆದು ಹೆಚ್ಚು ಬಡ್ಡಿ ನಮೂದಿಸಿದ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ ಮಾಡಲು ಕ್ರಮವಹಿಸುವುದು ಅಗತ್ಯವಾಗಿದೆ. ಪ್ರಸ್ತುತ ಬಡ್ಡಿದರವನ್ನು

ಬ್ಯಾಂಕ್‌ಗಳಿಂದ ಕೊಟೇಷನ್ ಮೂಲಕ ಪಡೆದು ತುಲನೆಮಾಡಿ ನಿಶ್ಚಿತ ಠೇವಣಿ ಮಾಡಿದೆ. ಇದರಿಂದ ಸ್ಪರ್ಧಾತ್ಮಕತೆ ಇಲ್ಲವಾಗಿದೆ. ಆದುದರಿಂದ ಸರ್ಕಾರಿ ಆದೇಶದಂತೆ ಕ್ರಮಕೈಗೊಳ್ಳಲು ತಿಳಿಸಿದೆ.

20 (ಅ) ನಿಶ್ಚಿತ ಠೇವಣಿಯಲ್ಲಿನ ಹೂಡಿಕೆಯ ಪರಿಪಕ್ವ ಮೊತ್ತಕಿಂತ ಕಡಿಮೆ ಜಮೆಯಾಗಿರುವುದು:–

2020–21ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಈ ಕೆಳಗೆ ವಿವರಿಸುವಂತೆ ವ್ಯತ್ಯಾಸ ಕಂಡುಬಂದಿರುತ್ತದೆ.

ಕ್ರ. ಸ	ಬ್ಯಾಂಕ್ ಹೆಸರು ಮತ್ತು ಶಾಖೆ	ಹೂಡಿಕೆ ಖಾತೆ ಸಂಖ್ಯೆ	ಪರಿಪಕ್ವ ಆಗುವ ದಿನಾಂಕ	ಪರಿಪಕ್ವ ಮೊತ್ತ	ಜಮೆಯಾದ ಖಾತೆ ಸಂಖ್ಯೆ	ಜಮೆಯಾದ ಮೊತ್ತ ಮತ್ತು ದಿನಾಂಕ	ವ್ಯತ್ಯಾಸದ ಮೊತ್ತಕ್ಕೆ ಷರಾ
1	ಕೆನರಾ ಬ್ಯಾಂಕ್ ಜಿಗಣಿ	3221401000977/2	06 08 2020	20306343	74310100003857 ಉತ್ತಮತೆ ಖಾತೆ	ರೂ.19,34,35,110/– 07–08–2020	ಕ್ರಮ ಸಂಖ್ಯೆ 1 ರಿಂದ 10 ರವರೆಗೂ ಒಟ್ಟಾರೆ ಪರಿಪಕ್ವ ಮೊತ್ತ ರೂ. 193444110/– ಗಳಾಗಿದ್ದು, ಆದರೆ ರೂ. 19,34,35,110/–ಗಳು ಮಾತ್ರ ಜಮೆಯಾಗಿದ್ದು ಇದರ ವ್ಯತ್ಯಾಸ ರೂ.9,000/–ಗಳಾಗಿದೆ.
2		3221401000977/3	06 08 2020	20306343			
3		3221401000977/4	06 08 2020	20306343			
4		3221401000977/5	06 08 2020	20306343			
5		3221401000977/6	06 08 2020	20306343			
6		3221401000977/7	06 08 2020	20306343			
7		3221401000977/8	06 08 2020	20306343			
8		3221401000977/9	06 08 2020	20306343			
9		3221401000977/10	06 08 2020	20306343			
10		3221401000977/11	06 08 2020	10687023			
11	ಎಸ್.ಬಿ.ಐ ಜಯನಗರ 4ನೇ ಬ್ಲಾಕ್	38723430362	25 08 2020	288549608	74310100003857 ಉತ್ತಮತೆ ಖಾತೆ	ರೂ.28,48,07,548/– 27–08–2020	ವ್ಯತ್ಯಾಸ ಮೊತ್ತ ರೂ. 37,42,060/–ಗಳಾಗಿದೆ.
12	ಕೆನರಾ ಬ್ಯಾಂಕ್ ಚಂದಾಪುರ	10654041002828/1	04 01 2021	424127304	74310100003857 ಉತ್ತಮತೆ ಖಾತೆ	ರೂ.42,41,27,304/– 05–01–2021	ವ್ಯತ್ಯಾಸ ಇರುವುದಿಲ್ಲ.
13	ಕೆನರಾ ಬ್ಯಾಂಕ್ ಜಯನಗರ 4ನೇ 'ಟಿ' ಬ್ಲಾಕ್ ಬೆಂಗಳೂರು	0471401005571/4	06 08 2020	20305343	520101029202171 ಕೆರೆ ಸಂರಕ್ಷಣೆ ಖಾತೆ	ರೂ.34,86,10,679/– 06–08–2020	ಕ್ರಮ ಸಂಖ್ಯೆ 13 ರಿಂದ 30 ರವರೆಗೂ ಒಟ್ಟಾರೆ ಪರಿಪಕ್ವ ಮೊತ್ತ ರೂ. 34,86,10,679/– ಗಳಾಗಿದ್ದು, ರೂ. 34,86,10,679/–ಗಳು ಜಮೆಯಾಗಿದ್ದು, ವ್ಯತ್ಯಾಸ ವಿರುವುದಿಲ್ಲ.
14		0471401005571/5	06 08 2020	20305343			
15		0471401005571/6	06 08 2020	20305343			
16		0471401005571/7	06 08 2020	20305343			
17		0471401005571/8	06 08 2020	20305343			
18		0471401005571/9	06 08 2020	20305343			
19		0471401005571/10	06 08 2020	20305343			
20		0471401005571/11	06 08 2020	20305343			
21		0471401005571/12	06 08 2020	20305343			
22		0471401005571/13	06 08 2020	20305343			
23		0471401005571/14	06 08 2020	20305343			
24		0471401005571/15	06 08 2020	20305343			
25		0471401005571/16	06 08 2020	20305343			
26		0471401005571/17	06 08 2020	20305343			
27		0471401005571/18	06 08 2020	20305343			

28		0471401005571/19	06 08 2020	20305343			
29		0471401005571/20	06 08 2020	20305343			
30		0471401005571/21	06 08 2020	3419848			
31	ಎಸ್.ಬಿ.ಐ ಜಯನಗರ 4ನೇ ಬ್ಲಾಕ್	38723434550	25 08 2020	231694648	520101029202171 ಕೆರೆ ಸಂರಕ್ಷಣೆ ಖಾತೆ	ರೂ.22,86,89,913/– 27–08–2020	ವ್ಯತ್ಯಾಸ ಮೊತ್ತ ರೂ. 30,04,735/–ಗಳಾಗಿದೆ.
32	ಕೆನರಾ ಬ್ಯಾಂಕ್ ಜಿಗಣಿ	3221401001035/1	04 01 2021	237193194	520101029202171 ಕೆರೆ ಸಂರಕ್ಷಣೆ ಖಾತೆ	ರೂ.23,71,93,194/– 04–01–2021	ವ್ಯತ್ಯಾಸ ಇರುವುದಿಲ್ಲ.
33	ಕೆನರಾ ಬ್ಯಾಂಕ್ ಜಯನಗರ 4ನೇ 'ಟಿ' ಬ್ಲಾಕ್	0471401005571/24	10 02 2021	137841373	520101029202171 ಕೆರೆ ಸಂರಕ್ಷಣೆ ಖಾತೆ	ರೂ.13,78,41,373/– 10–02–2021	ವ್ಯತ್ಯಾಸ ಇರುವುದಿಲ್ಲ.
			ಒಟ್ಟು	**1861460916**		**1854705121**	**ಒಟ್ಟು ವ್ಯತ್ಯಾಸ ರೂ. 6755795/–**

ಮೇಲೆ ತಿಳಿಸಲಾದ ವ್ಯತ್ಯಾಸದ ಮೊತ್ತ ರೂ. 6755795/–ಗಳಿಗೆ ಲೆಕ್ಕ ಪತ್ರ ವಿಚಾರಣೆ ಸಂಖ್ಯೆ:–03/2021–22, ದಿನಾಂಕ: 27.04.2021ರನ್ನು ಜಾರಿ ಮಾಡಿ, ಈ ವ್ಯತ್ಯಾಸದ ಮೊತ್ತಕ್ಕೆ ವಿವರಣೆಯನ್ನು ಕೋರಲಾಗಿತ್ತು. ಆದರೆ ಸಂಸ್ಥೆಯ ವತಿಯಿಂದ ಯಾವುದೇ ಉತ್ತರ ಬಂದಿರುವುದಿಲ್ಲ. ನಿಶ್ಚಿತ ಠೇವಣಿಯ ಪರಿಪಕ್ವ ಮೊತ್ತಕ್ಕೂ ಮತ್ತು ಸಂಸ್ಥೆಯ ಖಾತೆಗೆ ಜಮೆಯಾದ ಮೊತ್ತಕ್ಕೂ ಒಟ್ಟಾರೆ ರೂ. 6755795/–ಗಳು ವ್ಯತ್ಯಾಸವಿದ್ದು, ಇದರ ಸಂಬಂಧ, ಆದಾಯ ತೆರಿಗೆ ಇಲಾಖೆ/ಹೂಡಿಕೆ ಮಾಡಿದ್ದ ಬ್ಯಾಂಕ್‌ಗಳಿಗೆ ಸೂಕ್ತ ದಾಖಲೆಗಳನ್ನು ಒದಗಿಸಿ, ಕಡಿಮೆ ಜಮೆಯಾಗಿರುವ ಒಟ್ಟು ಮೊತ್ತ ರೂ.6755795/–ಗಳನ್ನು ಸಂಸ್ಥೆಯು ಹಿಂಪಡೆದು, ಸಂಬಂಧಪಟ್ಟ ಬ್ಯಾಂಕ್ ಖಾತೆಗೆ ಜಮೆಯಾಗಿರುವ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸುವವರೆಗೂ ರೂ. 6755795/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

21. ಭದ್ರತಾ ಠೇವಣಿ ವಿವರ:–

ಯೋಜನಾ ಪ್ರಾಧಿಕಾರದಲ್ಲಿ ಬಡಾವಣೆ ಮತ್ತುಕಟ್ಟಡ ಸಮುಚ್ಛಯಗಳಿಗೆ ಮಂಜೂರಾತಿ ನೀಡುವ ಸಮಯದಲ್ಲಿ ಸರ್ಕಾರಿ ಆದೇಶ ಸಂ:ನ ಅಇ 264 ಬಿಎಂಆರ್ 15 2013 ಬೆಂಗಳೂರು ದಿನಾಂಕ:03–09–2014ರಂತೆ ಪ್ರತಿಚದರ ಮೀಟರ್ ಒಂದಕ್ಕೆ ರೂ.50/–ಗಳಂತೆ ಭದ್ರತಾ ಠೇವಣಿ ಮೊತ್ತ ವಸೂಲಿಸಬೇಕಾಗಿದ್ದು, ಅದರಂತೆ ಪ್ರಸಕ್ತ ಸಾಲಿನಲ್ಲಿ ವಸೂಲಿಸಿ ಪ್ರಾಧಿಕಾರದ ಖಾತೆಗೆ ಜಮಾ ಮಾಡಿರುತ್ತಾರೆ. ವಹಿವಾಟಿನ ವಿವರ ಈ ಕೆಳಕಂಡಂತಿದೆ.

01.04.2020ಕ್ಕೆ ಪ್ರಾರಂಭಿಕ ಶಿಲ್ಕು	280415325
2020–21ನೇ ಸಾಲಿನಲ್ಲಿ ಸ್ವೀಕೃತಿ	12973030
ಒಟ್ಟು	**293388355**
2020–21ನೇ ಸಾಲಿನಲ್ಲಿ ವಾಪಸ್ಸಾತಿ	–
31.03.21ಕ್ಕೆ ಆಖೈರು ಶಿಲ್ಕು	**293388355**

22. ಭದ್ರತಾ ಠೇವಣಿ ಶುಲ್ಕಗಳ ಮರುಪಾವತಿ ವಿವರಗಳನ್ನು ಹಾಜರುಪಡಿಸದಿರುವ ವಿವರ:–

ಆನೇಕಲ್ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಿರ್ಮಿಸುವ 5ನೇ ಅಂತಸ್ತು ಮತ್ತು ಹೆಚ್ಚಿನ ಮಹಡಿಗಳುಳ್ಳ ವಾಸದ ಕಟ್ಟಡಗಳು, ಗುಂಪು ಕಟ್ಟಡಗಳು ಮತ್ತು ಗೃಹಸ್ತೋಮಗಳು ಹಾಗೂ 300 ಚ.ಮೀ.ಗಳಿಗಿಂತ ಹೆಚ್ಚಿನ ವಾಸದ ವಾಣಿಜ್ಯ ಕಟ್ಟಡಗಳಿಗೆ ಪ್ರತಿಚದರ ಮೀಟರ್‌ಗೆ ರೂ.50/– ಗಳಂತೆ ಭದ್ರತಾ ಠೇವಣಿಗಳನ್ನು ಅರ್ಜಿದಾರರಿಂದ

ವಸೂಲಿಸಬೇಕಿರುತ್ತದೆ. 2020–21ನೇ ಸಾಲಿನ ಅಂತ್ಯಕ್ಕೆ ಭದ್ರತಾ ಠೇವಣಿ ಶುಲ್ಕ ರೂ. 293388355/–ಗಳನ್ನು ವಸೂಲಿಸಿದ್ದು, ಭದ್ರತಾ ಠೇವಣಿ ಶುಲ್ಕಗಳನ್ನು ಮರುಪಾವತಿ ಮಾಡದಿರುವುದು ಕಂಡುಬಂದಿರುತ್ತದೆ.

ಮುಂದುವರೆದು ಹಿಂದಿನ ವರ್ಷಗಳಲ್ಲಿ ಮೇಲ್ಕಂಡ ವಿಧಗಳ ಕಟ್ಟಡಗಳನ್ನು ನಿರ್ಮಿಸಲು ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ನೀಡಿರುವ ಪೈಕಿ 2 ವರ್ಷಗಳ ಅವಧಿಯಲ್ಲಿ ಕಟ್ಟಡಗಳನ್ನು ಅನುಮೋದಿತ ನಕ್ಷೆಗಳಿಗೆ ಅನುಗುಣವಾಗಿ ನಿರ್ಮಿಸಿರುವ ಪ್ರಕರಣಗಳಿಗೆ ಭದ್ರತಾ ಠೇವಣಿ ಮರುಪಾವತಿ ಮಾಡಿರುವ ವಿವರಗಳು, ಇಲ್ಲವಾದಲ್ಲಿ ನಕ್ಷೆಗಳಿಗೆ ವಿರುದ್ಧವಾಗಿ ಕಟ್ಟಡಗಳನ್ನು ನಿರ್ಮಿಸಿದ್ದಲ್ಲಿ ಭದ್ರತಾ ಠೇವಣಿ ಮುಟ್ಟುಗೋಲು ಹಾಕಿಕೊಂಡಿದ್ದಲ್ಲಿ ಅವುಗಳ ವಿವರಗಳು ಹಾಗೂ 2 ವರ್ಷಗಳ ಅವಧಿಯಲ್ಲಿ ಕಟ್ಟಡಗಳು ಪೂರ್ಣಗೊಳಿಸದಿರುವ ಕಟ್ಟಡಗಳ ವಿರುದ್ಧ ನಿಯಮಾನುಸಾರ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರ / ಮಾಹಿತಿಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸಿರುವುದಿಲ್ಲ.

ಹಾಗೂ ನಿಯಮಾನುಸಾರ 2 ವರ್ಷದೊಳಗೆ ಕಟ್ಟಡ ನಿರ್ಮಿಸದಿದ್ದಲ್ಲಿ ಅಥವಾ ಅನುಮೋದಿತ ನಕ್ಷೆಗಳಿಗೆ ವಿರುದ್ಧವಾಗಿ ಕಟ್ಟಡ ನಿರ್ಮಿಸಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಭದ್ರತಾ ಠೇವಣಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಅಗತ್ಯಕ್ರಮವಹಿಸಲು ಸೂಚಿಸಿದೆ.

23. ಉತ್ತಮತೆ ಶುಲ್ಕದ ಶೇ.5ರಷ್ಟು ನಗರಯೋಜನಾ ಮಂಡಳಿಗೆ ಪಾವತಿಸಬೇಕಾಗಿದ್ದು, ಪೂರ್ಣ ಮೊತ್ತ ಪಾವತಿಸದಿರುವುದು ಹಾಗೂ ಡಿಸಿಬಿ ವಹಿ ನಿರ್ವಹಿಸದಿರುವುದು:–

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾಕಾಯ್ದೆ 1961ರ ಸೆಕ್ಷನ್ 18ರನ್ವಯ ಪ್ರಾಧಿಕಾರವು ಪ್ರತಿ ವಸೂಲಿಸದ ಉತ್ತಮತೆ ಶುಲ್ಕವನ್ನು ಕ್ಯಾಲೆಂಡರ್ ವರ್ಷದಲ್ಲಿ ಲೆಕ್ಕಾಚಾರ ಮಾಡಿ ಶೇಖರಿಸಿದ ಒಟ್ಟಾರೆ ಮೊತ್ತದಲ್ಲಿ ಶೇ.5%ರಷ್ಟು ಮೊತ್ತವನ್ನು ನಗರಯೋಜನಾ ಮಂಡಳಿಗೆ ಪಾವತಿಸಬೇಕಾಗಿರುತ್ತದೆ. ಅದರಂತೆ 2020–21ರ ಸಾಲಿನಲ್ಲಿ ಒಟ್ಟು ರೂ. 148339857/– ಗಳ ಉತ್ತಮತೆ ಶುಲ್ಕ ಸ್ವೀಕರಿಸಿದ್ದು ಈ ಮೊತ್ತಕ್ಕೆ ಶೇ.5ರಷ್ಟು ರೂ.7416993/–ಗಳನ್ನು ಪಾವತಿಸಬೇಕಾಗಿರುತ್ತದೆ. ಸದರಿ ಸಾಲಿನ ಶೇ.5ರ ಮೊತ್ತವನ್ನು ಪಾವತಿಸುವ ಬಗ್ಗೆ ಅಗತ್ಯ ಕ್ರಮವಹಿಸುವುದು ಮತ್ತು ಮಾಹಿತಿಯನ್ನು ಪರಿಶೀಲನೆಗೆ ಒದಗಿಸುವುದು. ಇದೇ ರೀತಿ ಪ್ರಾಧಿಕಾರ ಪ್ರಾರಂಭವಾದ ದಿನದಿಂದ ಉತ್ತಮತೆ ಶುಲ್ಕ ವಸೂಲಿಸುತ್ತಿದ್ದು ಇದಕ್ಕೆ ಸಂಬಂಧಿಸಿದಂತೆ ಬೇಡಿಕೆ ವಹಿ ನಿರ್ವಹಿಸಿಲ್ಲದ ಕಾರಣ ಪ್ರತಿ ವರ್ಷದ ಬೇಡಿಕೆ, ಪಾವತಿ ಮತ್ತು ಬಾಕಿಯ ವಿವರಗಳನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಕೂಡಲೇ ಒಂದು ಬೇಡಿಕೆ ವಹಿಯನ್ನು ನಿರ್ವಹಿಸಿ ಎಲ್ಲಾ ವಿವರಗಳನ್ನು ಅದರಲ್ಲಿ ನಮೂದಿಸಿ ವರ್ಷಾಂತ್ಯದಲ್ಲಿ ವರ್ಷದ ಬೇಡಿಕೆ, ವಸೂಲಾತಿ ಮತ್ತು ಬಾಕಿಯ ವಿವರಗಳನ್ನೊಳಗೊಂಡ ಘೋಷ್ವಾರೆ ಹಾಕಿ ಸಂಬಂಧಿಸಿದ ಅಧಿಕಾರಿಗಳು ದೃಢೀಕರಿಸುವುದಲ್ಲದೆ ಹಿಂದಿನ ಬಾಕಿ ಪಾವತಿಸುವ ಬಗ್ಗೆ ಅಗತ್ಯಕ್ರಮವಹಿಸುವುದು. ಸದರಿ ಸಾಲಿನ ಮೊತ್ತ ರೂ. 7416993/– ಗಳನ್ನು ಪಾವತಿಸುವವರೆಗೂ ಆಕ್ಷೇಪಣೆಯಲ್ಲಿಡಲಾಗಿದೆ.

24. ಕೊಳಚೆ ಪ್ರದೇಶದ ಅಭಿವೃದ್ಧಿ ಶುಲ್ಕದ ಸೆಸ್ ವಸೂಲಿ ಬಗ್ಗೆ:–

2020–21ನೇ ಸಾಲಿನಲ್ಲಿ ಯೋಜನಾ ಪ್ರಾಧಿಕಾರವು ತನ್ನ ವ್ಯಾಪ್ತಿಯಲ್ಲಿ ಬರುವ ವ್ಯವಸಾಯದ ಭೂಮಿಯನ್ನು ಜಿಲ್ಲಾಧಿಕಾರಿಯವರ ಅನುಮೋದನೆಯೊಂದಿಗೆ ವಸತಿಯೇತರವಾಗಿ ಪರಿವರ್ತನೆಗೊಂಡ ಖಾತೆದಾರರು, ಸದರಿ ಸ್ವತ್ತಿನ ವಿನ್ಯಾಸ ನಕ್ಷೆಯನ್ನು ಮಂಜೂರಾತಿ ಮಾಡಲು ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅದನ್ನು ತಾಂತ್ರಿಕ ನಿಯಮಗಳ ಪ್ರಕಾರ ಪರಿಶೀಲನೆ ಮಾಡಿ ವಿನ್ಯಾಸ ನಕ್ಷೆಯನ್ನು ಮಂಜೂರಾತಿ ನೀಡುವಾಗ **ಸರ್ಕಾರಿ ಆದೇಶ ಸಂಖ್ಯೆ ನಇ/912/ಎಂಐಟಿ/1995, ದಿನಾಂಕ:8–7–1996ರಂತೆ** ಕೊಳಚೆ ಪ್ರದೇಶ ಅಭಿವೃದ್ಧಿ ಶುಲ್ಕದ ಸೆಸ್‌ನ್ನು ವಸೂಲಿ ಮಾಡಬೇಕಾಗಿರುತ್ತದೆ. 2020–21ನೇ ಸಾಲಿಗೆ ವರ್ಷದ ಅಂತ್ಯಕ್ಕೆ ಒಟ್ಟು ರೂ.15944550/– ಗಳನ್ನು ಸಂಗ್ರಹಿಸಿರುವುದನ್ನು ಪರಿಶೀಲಿಸಲಾಗಿದೆ. ನಿಯಮಗಳ ನಿರ್ದೇಶನದಂತೆ ಕಾರ್ಯಕ್ರಮ ಅನುಷ್ಠಾನಕ್ಕೆ ಕ್ರಮಕೈಗೊಳ್ಳಲು ಲೆಕ್ಕತನಿಖೆಯಲ್ಲಿ ಅಭಿಪ್ರಾಯಿಸಿದೆ.

25. ಕೆರೆ ಸಂರಕ್ಷಣೆ ಅಭಿವೃದ್ಧಿ ಶುಲ್ಕದ ಮೊತ್ತದ ಬಳಕೆಯ ಬಗ್ಗೆ:–

2020–21ನೇ ಸಾಲಿನ ಅವಧಿಯಲ್ಲಿ ವ್ಯವಸಾಯದ ಭೂಮಿಯನ್ನು ಜಿಲ್ಲಾಧಿಕಾರಿಯವರ ಅನುಮೋದನೆಯೊಂದಿಗೆ ವಸತಿಯೇತರವಾಗಿ ಪರಿವರ್ತನೆಗೊಂಡು, ಖಾತೆದಾರರು ಸದರಿ ಸ್ವತ್ತಿನ ವಿನ್ಯಾಸ ನಕ್ಷೆಯನ್ನು ಮಂಜೂರಾತಿ ಮಾಡಲು ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅದನ್ನು ತಾಂತ್ರಿಕ ನಿಯಮಗಳ ಪ್ರಕಾರ ಪರಿಶೀಲನೆ ಮಾಡಿ ವಿನ್ಯಾಸ ನಕ್ಷೆಯನ್ನು ಮಂಜೂರಾತಿ ನೀಡುವಾಗ ಸರ್ಕಾರಿ ಆದೇಶದಂತೆ ಕೆರೆ ಸಂರಕ್ಷಣ ಅಭಿವೃದ್ಧಿ ಶುಲ್ಕವನ್ನು ವಸೂಲಿಸಬೇಕಾಗಿದ್ದು, ವಸೂಲಿ ಹಾಗೂ ಜಮೆಯ ವಿವರಣೆ ಈ ಕೆಳಕಂಡಂತಿದೆ.

ಕ್ರ.ಸಂ	ವಿವರ	ಮೊತ್ತ ರೂ.ಗಳಲ್ಲಿ
1	01–04–2020ರ ಪ್ರಾರಂಭಿಕ ಶಿಲ್ಕು	18489305
2	2020–21ರಲ್ಲಿ ವಸೂಲಿ/ಸಂಗ್ರಹಿಸಿದ ಮೊತ್ತ	68240976
	ಒಟ್ಟು ಮೊತ್ತ	**86730281**
3	2020–21ರಲ್ಲಿ ಪಾವತಿಸಿದ ಮೊತ್ತ	–
4	31–03–2021ಕ್ಕೆ ಬಾಕಿ	**86730281**

ಆನೇಕಲ್ ಯೋಜನಾ ಪ್ರಾಧಿಕಾರ ಕಚೇರಿಯ ನೀಡಿರುವ ಅನುಮೋದನೆಗಳಿಗೆ ಸದರಿ ಮೊತ್ತವನ್ನು ಸಾರ್ವಜನಿಕರಿಂದ ಕೆರೆ ಪುನರ್ಜೀವನ ಶುಲ್ಕವೆಂದು ವಸೂಲಿ ಮಾಡುವುದರಿಂದ ಸದರಿ ಮೊತ್ತವನ್ನು ಕೆರೆ ಅಭಿವೃದ್ಧಿ ಯೋಜನೆಗಾಗಿ ಮಾತ್ರ ಬಳಸಲು ಸೂಕ್ತ ಕ್ರಮ ಕೈಗೊಳ್ಳಲು ಲೆಕ್ಕತನಿಖೆಯಲ್ಲಿ ಅಭಿಪ್ರಾಯಿಸಿದೆ.

26. ಅನುಮೋದಿತ ವಸತಿ ವಿನ್ಯಾಸದಲ್ಲಿನ ಶೇ.40%ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಿರುವ ವಿವರ:–

ಕರ್ನಾಟಕ ಸರ್ಕಾರದ ಸುತ್ತೋಲೆ ಸಂ:ನಅಇ/112/ಬೆಂರೂಪ್ರಾ/2005 ದಿನಾಂಕ:26–05–2005ರಂತೆ ಅನುಮೋದಿತ ವಸತಿ ವಿನ್ಯಾಸದಲ್ಲಿನ ಶೇ.60ರಷ್ಟು ನಿವೇಶನಗಳನ್ನು ನೋಂದಣಿ ಮಾಡುವ ಬಗ್ಗೆ ಉಪನೋಂದಣಾಧಿಕಾರಿಗಳಿಗೆ ಪತ್ರ ಮುಖೇನ ಬಿಡುಗಡೆಗೊಳಿಸಿರುವ ಸಂಬಂಧ ಹಿಂದಿನ ಸಾಲಿನ ವರದಿಗಳಲ್ಲಿ ಪ್ರಸ್ತಾಪಿಸಲಾಗಿದೆ. ಅದರಂತೆ ಷರತ್ತಿನ ಕ.ಸಂ: 1ರಂತೆ ಎರಡನೇ ಹಂತದಲ್ಲಿ ಒಟ್ಟಾರೆ ವಿನ್ಯಾಸದಲ್ಲಿನ ಉಳಿಕೆ ಶೇ.40ರಷ್ಟು ನಿವೇಶನಗಳನ್ನು ಬಿಡುಗಡೆಗೆ ಮಾಡುವ ಮುನ್ನ ವಿನ್ಯಾಸದಲ್ಲಿನ ಎಲ್ಲಾ ಸಿವಿಲ್ ಕಾಮಗಾರಿಗಳನ್ನು, ಅಂದರೆ ಡಾಂಬರ್ ರಸ್ತೆ, ಮಳೆ ನೀರಿನ ಚರಂಡಿ, ಕೊಳಚೆ ನೀರಿನ ಸಂಗ್ರಹಣ ಘಟಕ, ಕುಡಿಯುವ ನೀರಿನ ಸರಬರಾಜು (ಓಹೆಚ್‌ಟಿ) ವಿದ್ಯುಚ್ಛಕ್ತಿ ಸಂಪರ್ಕ ಹಾಗೂ ರಸ್ತೆ ಬದಿ ಸಾಲು ಮರಗಳ ನೆಡುವಿಕೆ ಕಾರ್ಯವನ್ನು ಎರಡು ವರ್ಷದೊಳಗೆ ಸಂಪೂರ್ಣಗೊಳಿಸಿರುವ ಬಗ್ಗೆ ಹಾಗೂ ಷರತ್ತಿನಂತೆ ಎರಡು ವರ್ಷಗಳ ಅವಧಿಯಲ್ಲಿ ನಾಗರೀಕ ಸೌಲಭ್ಯಗಳ ಕಾರ್ಯವನ್ನು ನಿರ್ವಹಿಸಿರುವ ವಸತಿ ವಿನ್ಯಾಸಗಳ ಎರಡು ವರ್ಷಗಳ ಕಾಲಮಿತಿಯೊಳಗೆ ನಿರ್ವಹಿಸದೇ ನವೀಕರಣವನ್ನು ಪಡೆದ ಮಾಲೀಕರ ವಿವರ ನವೀಕರಣವನ್ನು ಪಡೆಯದೇ ಬಡಾವಣೆ ಅಭಿವೃದ್ಧಿಯನ್ನು ಪಡಿಸದೇ ಇರುವ ಮಾಲೀಕರ ವಿವರ ಹಾಗೂ ಪ್ರಾಧಿಕಾರವು ತೆಗೆದು ಕೊಂಡಿರುವ ಕ್ರಮದ ವಿವರಗಳ ಮಾಹಿತಿಯನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿರುವುದಿಲ್ಲ.

ಇದಕ್ಕೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆ ಸಂಖ್ಯೆ ನಅಇ:112: ಬೆಂ.ರೂ.ಪ್ರಾ 2005 ದಿನಾಂಕ 26.05.2005ರಂತೆ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಸತಿ ವಿನ್ಯಾಸದಲ್ಲಿನ ಎರಡನೇ ಹಂತದ ಶೇ.40ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಸಂಬಂಧ 2 ವರ್ಷಗಳ ಕಾಲಮಿತಿಯೊಳಗೆ ಅಭಿವೃದ್ಧಿ ಪಡಿಸದೆ/ನವೀಕರಣ ಪಡೆಯದೆ ಇರುವ ವಿನ್ಯಾಸ ಮಾಲೀಕರಿಗೆ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ:ಬಿಎಂಆರ್‌ಡಿಎ/ಎಡಿಟಿಪಿ–2/ಇತರೆ/24/2012–13 ದಿನಾಂಕ:31–10–2014 ರಂತೆದಂಡ ವಸೂಲಿಸಿ ನಿವೇಶನ ಬಿಡುಗಡೆ ಕ್ರಮವಹಿಸುವುದು ಅವಶ್ಯಕವಾಗಿರುತ್ತದೆ.

27. ಆನೇಕಲ್ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಸಿ.ಎ ನಿವೇಶನ ಮತ್ತು ಪಾರ್ಕ್‌ಗಳ ವಿವರದ ವಿವರ:–

2020–21ನೇ ಸಾಲಿನಲ್ಲಿ ಯೋಜನಾ ಪ್ರಾಧಿಕಾರದ ವತಿಯಿಂದ ಅನುಮೋದನೆಗೊಂಡಿರುವ ವಿವಿಧ ಬಡಾವಣೆಗಳ ವಿವರಗಳು ಹಾಗೂ ಅನುಮೋದಿತ ಬಡಾವಣೆಗಳಲ್ಲಿ ನಾಗರೀಕ ಸೌಲಭ್ಯಗಳಿಗಾಗಿ ಮೀಸಲಿಟ್ಟ ಜಾಗಗಳಾದ ರಸ್ತೆ/ಚರಂಡಿ/ಪಾರ್ಕ್/ಆಸ್ಪತ್ರೆ/ಆಟದ ಮೈದಾನ ಹಾಗೂ ಸಿ.ಎ. ನಿವೇಶನಗಳನ್ನು ಪ್ರಾಧಿಕಾರದ ಹೆಸರಿಗೆ ಉಪ ನೊಂದಣಾಧಿಕಾರಿಗಳ ಕಛೇರಿಯಿಂದ ನೊಂದಣಿ ಮಾಡಿಸಿರುವ ವಿವರವನ್ನು ಒಳಗೊಂಡಂತೆ ದೃಢೀಕೃತ ವಹಿಯನ್ನು ಹಾಜರುಪಡಿಸುವಂತೆ ಈ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ:02/2021–22 ದಿನಾಂಕ: 12.04.2021ರಂದು ಜಾರಿಮಾಡಿಕೋರಲಾಗಿತ್ತು. ಈ ಸಂಬಂಧ ಯೋಜನಾ ಪ್ರಾಧಿಕಾರದಿಂದ 2020–21ನೇ ಸಾಲಿನಲ್ಲಿ ಅನುಮೋದಿಸಿದ ವಿವಿಧ ಬಡಾವಣೆಗಳ ನಕ್ಷೆ ಮಂಜೂರಾತಿ, ನಾಗರಿಕ ಸೌಲಭ್ಯ ಉದ್ಯಾನವನದ ಜಾಗಗಳನ್ನು ಪ್ರಾಧಿಕಾರದವರು ಪಡೆದಿರುತ್ತಾರೆ. ಈ ಬಗ್ಗೆ ವಿವರವನ್ನು ಅನುಬಂಧ –05ರಲ್ಲಿ ನೀಡಲಾಗಿದೆ.

27 (ಅ). 2020–21ನೇ ಸಾಲಿನಲ್ಲಿ ಸಿ.ಎ. ನಿವೇಶನ ಭೋಗ್ಯಕ್ಕೆ ನೀಡಿರುವ ವಿವರ:–

2020–21ನೇ ಸಾಲಿನಲ್ಲಿ ಆನೇಕಲ್ ಯೋಜನಾ ಪ್ರಾಧಿಕಾರದ ವತಿಯಿಂದ ಮರಸೂರು ಗ್ರಾಮದ ಸರ್ವೆ ನಂ. 306 ಜಾಗವನ್ನು ಪ್ರಾದೇಶಿಕ ಸಾರಿಗೆ ಆಯುಕ್ತರು, ಚಂದಾಪುರ ಇವರಿಗೆ ಸರ್ಕಾರದ ಆದೇಶ/ಸುತ್ತೋಲೆಯಲ್ಲಿ ತಿಳಿಸಿರುವ ನಿಯಮಗಳಂತೆ ಒಟ್ಟು ರೂ. 1,57,63,545/–ಗಳಿಗೆ ಸದರಿ ಜಾಗವನ್ನು ಮೂವತ್ತು ವರ್ಷದ ಭೋಗ್ಯದ ಆಧಾರದ ಮೇಲೆ ನೀಡಿರುವುದು ಕಂಡುಬಂದಿದೆ.

28. ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿರುವ ಬಡಾವಣೆಗಳಲ್ಲಿ ಗರಿಷ್ಟ 5 ವರ್ಷ ಮುಗಿದರೂ ಅಭಿವೃದ್ಧಿ ಪಡಿಸದೇ ಇರುವ ಬಡಾವಣೆಗಳ ವಿವರ:–

2020–21ನೇ ಸಾಲಿನಲ್ಲಿ ಆನೇಕಲ್ ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿರುವ ಬಡಾವಣೆಗಳಲ್ಲಿ ಗರಿಷ್ಟ 5 ವರ್ಷ ಮುಗಿದರೂ ಸಹ ಅಭಿವೃದ್ಧಿಪಡಿಸದೇ ಇರುವ ಬಡಾವಣೆಗಳ ವಿವರಗಳನ್ನು ಹಾಜರುಪಡಿಸುವಂತೆ ಲೆಕ್ಕ ವಿಚಾರಣೆ ಪತ್ರ ಸಂಖ್ಯೆ:04/2021–22 ದಿನಾಂಕ:26.04.2021ರಂದು ನೀಡಿದ್ದು ಇದಕ್ಕೆ ಸಂಬಂಧಿಸಿದಂತೆ ಆನೇಕಲ್ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ನೀಡಿರುವ ವಿನ್ಯಾಸಗಳ ಪೈಕಿ 5 ವರ್ಷ ಪೂರ್ಣಗೊಂಡಿದ್ದರೂ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ನಿವೇಶನಗಳನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಿಸಿಕೊಳ್ಳದೇ ಇರುವ ಮಾಲೀಕರುಗಳಿಗೆ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಂಪೂರ್ಣವಾಗಿ ನಿವೇಶನಗಳನ್ನು ಬಿಡುಗಡೆ ಮಾಡಿಕೊಳ್ಳಲು ಸೂಚಿಸಿ ಪತ್ರ ವ್ಯವಹರಿಸಲಾಗಿರುತ್ತದೆ ಎಂದು ಜಂಟಿ ನಿರ್ದೇಶಕರು ಸದಸ್ಯ–ಕಾರ್ಯದರ್ಶಿ ಆನೇಕಲ್ ಯೋಜನಾ ಪ್ರಾಧಿಕಾರದವರು ಉತ್ತರಿಸಿರುತ್ತಾರೆ. ಸರ್ಕಾರದ ಸುತ್ತೋಲೆ ಸಂಖ್ಯೆ: ನ.ಅ.ಇ/599/ಮೈ.ಅ.ಪ್ರ/2012 ದಿನಾಂಕ:03.12.2012 ರಂದು ಗರಿಷ್ಟ 5 ವರ್ಷದೂಳಗೆ ಅನುಮೋದಿಸಿರುವ ಬಡಾವಣೆಗಳನ್ನು ಅಭಿವೃದ್ಧಿಸಬೇಕೆಂದು ಆದೇಶವಿರುತ್ತದೆ. ಈ ಬಗ್ಗೆ ಕ್ರಮ ವಹಿಸಿ ಸರ್ಕಾರದ ಸುತ್ತೋಲೆಯಂತೆ ಕ್ರಮವಹಿಸಿವುದು ಅವಶ್ಯವಿರುತ್ತದೆ.

29. 2020–21ನೇ ಸಾಲಿನಲ್ಲಿ ಅಪಾರ್ಟ್‌ಮೆಂಟ್‌ಗಳಿಗೆ ನಕ್ಷೆ ಮಂಜೂರಾತಿ ನೀಡಿರುವ ವಿವರ:–

2020–21ರ ಸಾಲಿನಲ್ಲಿ ಎಷ್ಟು ಅಪಾರ್ಟ್‌ಮೆಂಟ್‌ಗಳಿಗೆ ನಕ್ಷೆ ಮಂಜೂರಾತಿ ನೀಡಲಾಗಿದೆ ಹಾಗೂ ಈ ಬಗ್ಗೆ ಪ್ರಾಧಿಕಾರಕ್ಕೆ ಪಡೆದಿರುವ ಉತ್ತಮತೆ ಶುಲ್ಕ, ಭದ್ರತಾಠೇವಣಿ ಹಾಗೂ ನಕ್ಷೆಪ್ರತಿ ಶುಲ್ಕದ ವಿವರಗಳನ್ನು ಲೆಕ್ಕ ತನಿಖೆಗೆ ಒದಗಿಸಲು ಕೋರಲಾಗಿದ್ದು, ಈ ಬಗ್ಗೆ ಲೆಕ್ಕ ವಿಚಾರಣೆ ಪತ್ರ ಸಂಖ್ಯೆ: 01/2021–22, ದಿನಾಂಕ:22.4.2021ರಲ್ಲಿ ನೀಡಲಾಗಿದ್ದು, ಇದುವರೆವಿಗೂ ಮಾಹಿತಿಯನ್ನು ನೀಡಿರುವುದಿಲ್ಲ.

30. ಉದ್ಯಾನಗಳ ಹಾಗೂ ತೆರೆದ ಜಾಗದ ವಿವರ :–

ಆನೇಕಲ್ ಮಹಾಯೋಜನೆ(Master plan)ನಲ್ಲಿ ಸೂಚಿಸಿರುವಂತೆ ಪ್ರಾಧಿಕಾರದ ವ್ಯಾಪ್ತಿಗೊಳಪಡುವ ಪ್ರದೇಶಗಳಲ್ಲಿ ಉದ್ಯಾನಗಳು ಮತ್ತು ತೆರೆದ ಜಾಗ (Park and open space) ಜಾಗ ನಿಗದಿಪಡಿಸಿರುವ ಬಗ್ಗೆ

ಮಾಹಿತಿ ಇರುವುದಿಲ್ಲ. ಆದುದರಿಂದ ಮಹಾಯೋಜನೆ (Master plan) ನಲ್ಲಿ ನಿಗಧಿಪಡಿಸಿರುವಂತೆ ಪೂರ್ಣವಾಗಿ ಪಾರ್ಕುಗಳು ಹಾಗೂ ಇತರೆ ಜಾಗಗಳಿಗೆ (Open space) ಅವಶ್ಯವಿರುವ ಜಮೀನು ಹಾಗೂ ಜಾಗಗಳನ್ನು ಸ್ವಾಧೀನಪಡಿಸಿ ನಿರ್ಮಿಸಲು ವರದಿ ಅಭಿಪ್ರಾಯಿಸಿದೆ.

31. ಆನೇಕಲ್ ಯೋಜನಾ ಪ್ರಾಧಿಕಾರ ನಿಧಿಯಲ್ಲಿ ನಿರ್ವಹಿಸಲಾಗಿರುವ ಕಾಮಗಾರಿಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗೆ ವಹಿಸಿರುವ ಬಗ್ಗೆ:–

ಯೋಜನಾ ಪ್ರಾಧಿಕಾರ ನಿಧಿಯಲ್ಲಿ ಲಭ್ಯವಿರುವ ಹಣದಲ್ಲಿ ಶೇ.25ರಷ್ಟು ಹಣವನ್ನು ಆಡಳಿತಾತ್ಮಕ ವೆಚ್ಚಗಳಿಗೆ ಮೀಸಲಿರಿಸಿಕೊಂಡು ಉಳಿದ ಹಣವನ್ನು ಯೋಜನಾ ಪ್ರಾಧಿಕಾರದ ಪ್ರದೇಶಗಳಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಕಿಯೆ ಕೈಗೊಳ್ಳಲಾಗಿದೆ. ಅದರಂತೆ ದಿನಾಂಕ:24.09.2012 ರಂದು ನಡೆದ 37ನೇ ಪ್ರಾಧಿಕಾರದ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:1ರ ತೀರ್ಮಾನದಂತೆ ರೂ.1500 ಲಕ್ಷಗಳಿಗೆ ಕಾಮಗಾರಿಗಳ ಪಟ್ಟಿ ಸಿದ್ದಪಡಿಸಿ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತದೆ ಹಾಗೂ ಸರ್ಕಾರದ ಆದೇಶ ಸಂಖ್ಯೆ ನಅಇ 50 ಬಿಎಂಆರ್ 2012, ಬೆಂಗಳೂರು ದಿನಾಂಕ 02–01–2013 ರಂತೆ ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತಾರೆ. ದಿನಾಂಕ 27.11.2013ರ ಸರ್ಕಾರದ ಆದೇಶದಂತೆ ಕಾಮಗಾರಿಗಳಿಗೆ ಆಡಳಿತಾತ್ಮಕ ಕಾಮಗಾರಿಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆ ವತಿಯಿಂದ ಹಾಗೂ ಲೋಕೋಪಯೋಗಿ ಇಲಾಖೆಗಳ ವತಿಯಿಂದ ನಿರ್ವಹಿಸಲಾಗಿದ್ದು, ಈ ಸಂಬಂಧ ಸದರಿ ಇಲಾಖೆಗಳಿಗೆ ಪಾವತಿಸಲಾಗಿದೆ. ಪಾವತಿಸಿದ ಮೊತ್ತದಲ್ಲಿ ರೂ. 26179860/– ಗಳಿಗೆ ಉಪಯೋಗತ ಪ್ರಮಾಣ ಪತ್ರ (Utiliation Certificate) ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸುವವರೆಗೆ ರೂ.26179860/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರ ಈ ಕೆಳಕಂಡಂತಿದೆ

ಕ್ರ ಸಂ	ದಿನಾಂಕ	ಚೆಕ್ ಸಂ	ಮೊತ್ತ
1	22.01.2021	000012	11057984
2	04.07.2020	340131	7941765
3	18.08.2020	340154	7180111
			26179860

32. ಪಿಂಚಣಿ ವಂತಿಕೆ ವಿವರ:–

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕೆಸಿಎಸ್ಆರ್ ನಿಯಮ 427 ರಂತೆ ಅನ್ಯ ಸೇವೆಯ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಪಿಂಚಣಿ ವಂತಿಕೆಯನ್ನು 1/8 ರಂತೆ ಲೆಕ್ಕಾಚಾರ ಮಾಡಿ ರಾಜ್ಯ ಸಂಚಿತ ನಿಧಿಗೆ ಪಾವತಿಸಬೇಕಾಗಿರುತ್ತದೆ. ಅದರಂತೆ ದಿನಾಂಕ: 01–04–2020 ರಿಂದ 31–03–2021ರವರೆಗೆ ಕಾರ್ಯನಿರ್ವಹಿಸಿರುವ ನೌಕರರ ಪಿಂಚಣಿ ವಂತಿಕೆ ಲೆಕ್ಕಾಚಾರದ ವಿವರಗಳೊಂದಿಗೆ ಪಾವತಿ ಮಾಡಿದ ವಿವರಗಳನ್ನು ಹಾಜರುಪಡಿಸುವಂತೆ ಲೆಕ್ಕಾವಿಚಾರಣಾ ಪತ್ರ ಸಂಖ್ಯೆ 01/2021–22 ದಿನಾಂಕ: 22–04–2021ರಂದು ಜಾರಿಮಾಡಲಾಗಿ ಅದಕ್ಕೆ ಉತ್ತರವಾಗಿ ಅನ್ಯ ಸೇವೆಯ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಪಿಂಚಣಿ ವಂತಿಕೆಗೆ ಸಂಬಂಧಿಸಿದಂತೆ 2020–21ನೇ ಸಾಲಿನಲ್ಲಿ ಯಾವುದೇ ಪಿಂಚಣಿ ವಂತಿಕೆಯನ್ನು ಪಾವತಿಸಿರುವುದಿಲ್ಲ. 2020–21ನೇ ಸಾಲಿನ ಪಿಂಚಣಿ ವಂತಿಕೆಯನ್ನು ಲೆಕ್ಕಾಚಾರ ಮಾಡಿದ್ದು, ಮುಂದಿನ ಸಾಲಿನ ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಲಾಗುವುದು ಎಂದು ಉತ್ತರ ನೀಡಿರುತ್ತಾರೆ. ಸದರಿ ವಿಷಯದಲ್ಲಿ ಮುಂದಿನ ಸಾಲಿನ ಲೆಕ್ಕ ಪರಿಶೋಧನೆ ವೇಳೆ ವಿವರ ಹಾಜರುಪಡಿಸಲು ತಿಳಿಸಿದೆ.

33. ಹೊರಗುತ್ತಿಗೆ ಆಧಾರದ ಮೇಲೆ ನೌಕರರನ್ನು ನೇಮಿಸಿಕೊಂಡು ಪ್ರಾಧಿಕಾರದ ಕೆಲಸ ಕಾರ್ಯಗಳನ್ನು ನಿರ್ವಹಿಸುತಿರುವುದು:–

2020–21ರ ಸಾಲಿನಲ್ಲಿ ಪ್ರಾಧಿಕಾರದ ದಿನನಿತ್ಯ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಖಾಯಂ ನೌಕರರು ಇಲ್ಲದ ಪ್ರಯುಕ್ತ ಈ ಕೆಳಕಂಡ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡು ವೇತನ ಪಾವತಿ ಮಾಡಲಾಗಿದೆ.

ಕ್ರ.ಸಂ.	ಹುದ್ದೆಯ ವಿವರ	ನೇಮಿಸಿಕೊಂಡ ಹುದ್ದೆ	ಪಡೆಯುತ್ತಿರುವ ವೇತನ
1.	ಲೆಕ್ಕಿಗರು	01 ಹುದ್ದೆ	15248
2.	ದ್ವಿತೀಯ ದರ್ಜೆ ಸಹಾಯಕರು	01 ಹುದ್ದೆ	12443
3.	ಕಂಪ್ಯೂಟರ್ ಆಪರೇಟರ್	03 ಹುದ್ದೆ	12443
4.	'ಡಿ' ಗ್ರೂಪ್ ನೌಕರರು	02 ಹುದ್ದೆ	9209

ಮೇಲಿನ ನೌಕರರನ್ನು ನೇಮಿಸಿಕೊಳ್ಳಲು, ಮೆ॥ ಕಿಯೋನಿಕ್ಸ್ ಸಂಸ್ಥೆ ಯವರಿಂದ ಮೇಲಿನ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದ್ದು, ಒಂದು ವರ್ಷದ ಅವಧಿಗೆ ಪ್ರಸ್ತುತ ನೌಕರರು ಪಡೆಯುತ್ತಿರುವ ಸಂಭಾವನೆಯನ್ನು ಸ್ಥಿರೀಕರಣಗೊಳಿಸಿ ಮಂಜೂರಾತಿ ನೀಡಲಾಗಿದೆ. ಇನ್ನು ಮುಂದೆ ಈ ಸಂಬಂಧ ಆಯಾ ವರ್ಷಗಳನ್ನು ಟೆಂಡರ್ ಆಹ್ವಾನಿಸಿ ಸ್ಪರ್ಧಾತ್ಮಕದರದ ಆಧಾರದ ಮೇಲೆ ಕ್ರಮವಹಿಸುವುದು ಅಗತ್ಯವಾಗಿರುತ್ತದೆ.

ಪ್ರಾಧಿಕಾರದ ದೈನಂದಿನ ಕೆಲಸ ಕಾರ್ಯಗಳ ನಿರ್ವಹಣೆಗಾಗಿ, ಒಬ್ಬ ಉಪನಿರ್ದೇಶಕರು, ಒಬ್ಬ ಸಹಾಯಕ ನಿರ್ದೇಶಕರು ಮತ್ತು ಒಬ್ಬ ನಗರ ಯೋಜಕರ ಸೇವೆಯನ್ನು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಯಿಂದ ಅನ್ಯ ಸೇವೆಯ ಮೇಲೆ ಪಡೆಯಲಾಗಿದೆ. ಆಡಳಿತಾತ್ಮಕ ಕೆಲಸಗಳ ನಿರ್ವಹಣೆಗಾಗಿ ತಾತ್ಕಾಲಿಕವಾಗಿ ಅಕೌಂಟೆಂಟ್, ದ್ವಿತೀಯ ದರ್ಜೆ ಸಹಾಯಕರು ಹಾಗೂ ಡಾಟಾ ಎಂಟ್ರಿ ಆಪರೇಟರ್ ಮತ್ತು ದಲಾಯತ್ ಸೇವೆಯನ್ನು ಬಾಹ್ಯ ಮೂಲದಿಂದ ಪಡೆಯಲಾಗಿದೆ.

34. ಹೊರಗುತ್ತಿಗೆ ವಾಹನ ಪಡೆದಿರುವ ವಿವರ :–

2020–21ರ ಸಾಲಿನಲ್ಲಿ ಪ್ರಾಧಿಕಾರದ ದಿನನಿತ್ಯ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ವಾಹನಗಳನ್ನು ಬಾಡಿಗೆಗೆ ಪಡೆದಿರುವುದು ಕಂಡುಬಂದಿರುತ್ತದೆ. ಮೆ॥ ಶ್ರೀ ರಾಮ ಟೂರ್ಸ್ & ಟ್ರಾವಲ್ಸ್ ರವರು ವಾಹನಗಳನ್ನು ಸದರಿ ಸಂಸ್ಥೆಗೆ ಬಾಡಿಗೆ ಆಧಾರದ ಮೇಲೆ ನೀಡಿರುವುದು ಕಂಡುಬಂದಿರುತ್ತದೆ. ಸದರಿ ಸಾಲಿಗೆ ಒಟ್ಟು ರೂ.1206800/–ಗಳನ್ನು ಪಾವತಿಸಲಾಗಿರುತ್ತದೆ.

35. ಮಾಹಿತಿ ಹಕ್ಕು ವಸೂಲಿ ಶುಲ್ಕ ಲೆಕ್ಕ ಶೀರ್ಷಿಕೆಗೆ ಜಮಾ ಮಾಡದಿರುವುದು:–

ಪ್ರಸಕ್ತ ಸಾಲಿನಲ್ಲಿ ಮಾಹಿತಿ ಹಕ್ಕಿನಡಿ ಪ್ರಾಧಿಕಾರದಲ್ಲಿ ರೂ. 560/– ಗಳ ಶುಲ್ಕ ವಸೂಲಿಯಾಗಿದ್ದು, ಸದರಿ ಶುಲ್ಕವನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಬೇಕಾಗಿದ್ದು, ಜಮೆ ಮಾಡದೇ ಸಂಸ್ಥೆಯ ಖಾತೆಯಲ್ಲಿ ಉಳಿದಿರುತ್ತದೆ. ಸದರಿ ಮೊತ್ತವನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ ವಿವರಗಳನ್ನು ಹಾಜರುಪಡಿಸುವವರೆಗೆ ರೂ.560/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

36. ಸ್ಥಿರ–ಚರಾಸ್ತಿ ವಹಿ ನಿರ್ವಹಿಸಿ ಪರಿಶೀಲನೆಗೆ ಹಾಜರುಪಡಿಸದಿರುವುದು:–

ಪ್ರಾಧಿಕಾರವು ಸ್ಥಿರ ಮತ್ತು ಚರಾಸ್ತಿಗಳ ವಹಿಯನ್ನು ನಿರ್ವಹಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಈ ಸಂಬಂಧ ಪ್ರಾಧಿಕಾರವು ವೈಯಕ್ತಿಕ ಗಮನ ಹರಿಸಿ ಭೂಮಿ ಹಾಗು ಕಟ್ಟಡಗಳು ಮತ್ತು ಕಚೇರಿಯಲ್ಲಿ ಲಭ್ಯವಿರುವ ಪಿಠೋಪಕರಣ, ಗಣಕ ಯಂತ್ರಗಳು, ಆಲ್ಮೇರಾ ಹಾಗೂ ವಾಹನ ಅಲ್ಲದೆ ಇನ್ನಿತರೇ

ಚರಾಸ್ತಿಯ ವಿವರಗಳನ್ನು ವಹಿಯಲ್ಲಿ ನಮೂದಿಸಿ ವಾರ್ಷಿಕ ಸತ್ಯಾಪನೆ ಮಾಡಿ ಧೃಢೀಕರಿಸಿದ ವಹಿಯನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

37. ಲೆಕ್ಕ ಪರಿಶೋಧನಾ ಶುಲ್ಕ:–

2020–21ರ ಸಾಲಿನಲ್ಲಿ ಪ್ರಾಧಿಕಾರದಲ್ಲಿ ಈ ಕೆಳಕಂಡಂತೆ ಆರ್ಥಿಕ ವಹಿವಾಟು ನಡೆಸಿದ್ದು ಲೆಕ್ಕ ತಪಾಸಣಾ ಶುಲ್ಕವನ್ನು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಿದೆ.

(ಅ)	2020–21ನೇ ಸಾಲಿನ ಒಟ್ಟು ಜಮೆ		**2279186746**
	(–)ಕಳೆಯುವುದು		
1	ಬಡಾವಣೆ / ಕಟ್ಟಡ ಸಮುಚ್ಛಯ/ ಭದ್ರತಾ ಠೇವಣಿ/ ಕರಗಳ ಸಂಗ್ರಹ	233487956	
2	ನಿಶ್ಚಿತ ಠೇವಣಿಗಳ ಹಿಂಪಡೆತ	1854705121	
3	ಬ್ಯಾಂಕ್ ಬಡ್ಡಿ	3635408	
4	ಮಾಹಿತಿ ಹಕ್ಕು ಶುಲ್ಕ	21960	
	ಒಟ್ಟು ರೂ.	**2091850445**	
	ಲೆಕ್ಕ ಪರಿಶೋಧನಾ ಶುಲ್ಕಕ್ಕೆ ನಿವ್ವಳ ಜಮೆ ರೂ.		**187336301**
(ಆ)	**2020–21ನೆ ಸಾಲಿನ ಒಟ್ಟು ವೆಚ್ಚ**		**2118095262**
	(–)ಕಳೆಯುವುದು		
1	ಆದಾಯತೆರಿಗೆ ಪಾವತಿ	181221	
2	**ನಿಶ್ಚಿತ ಠೇವಣಿಗಳು**	2042973000	
3	**ದೂರವಾಣಿ ವೆಚ್ಚ**	24257	
4	**ವಿದ್ಯುತ್ ಶುಲ್ಕ**	30113	
5	**ಬ್ಯಾಂಕ್‌ಚಾರ್ಜಸ್**	7895	
	ಒಟ್ಟು ರೂ.	**2043216486**	
	ಲೆಕ್ಕ ಪರಿಶೋಧನಾ ಶುಲ್ಕಕ್ಕೆ ನಿವ್ವಳ ವೆಚ್ಚ ರೂ.		**74878776**

ಲೆಕ್ಕ ಪರಿಶೋಧನಾ ಶುಲ್ಕಕ್ಕೆ ತೆಗೆದುಕೊಳ್ಳಬೇಕಾದ ಒಟ್ಟು ನಿವ್ವಳ ಜಮಾ ಮತ್ತು ನಿವ್ವಳ ವೆಚ್ಚ ಒಟ್ಟು

ಮೊಬಲಗು (187336301 + 74878776 = 262215077)

$$\frac{(262215077 * 0.20)}{100} = 524430/-$$

ದಿನಾಂಕ: 31–03–2021ಕ್ಕೆ ಸಾಲಿಗೆ ಪಾವತಿಸಬೇಕಿರುವ ಬಾಕಿ ಇರುವ ಲೆಕ್ಕ ಪರಿಶೋಧನಾ ಶುಲ್ಕ ರೂ..524430/–ಗಳನ್ನು ಜಮಾ ಮಾಡಲು ಅಗತ್ಯಕ್ರಮ ವಹಿಸುವುದು. ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನಾ ಶುಲ್ಕ ಲೆಕ್ಕ ಶೀರ್ಷಿಕೆಗೆ ಜಮಾ ಮಾಡುವವರೆಗೂ ರೂ. 524430/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಲೆಕ್ಕ ತನಿಖಾ ಶುಲ್ಕದ ಡಿ.ಸಿ.ಬಿ ವಿವರ

01–04–2019ಕ್ಕೆ ಪ್ರಾರಂಭಿಕ ಬಾಕಿ	2834866
2020–21ರಲ್ಲಿ ಬೇಡಿಕೆ	524430
ಒಟ್ಟು	**3359296**
2020–21ರಲ್ಲಿ ಪಾವತಿ	1487146

31–03–2020ಕ್ಕೆ ಆಖೈರು ಶಿಲ್ಕು	**1872150**

ಲೆಕ್ಕ ಶೀರ್ಷಿಕೆ: 0070–60–110–0–01

0070	ಇತರೆ ಆಡಳಿತ ಸೇವೆಗಳು
60	ಇತರೆ ಸೇವೆಗಳು
110	ಸರ್ಕಾರಿ ಲೆಕ್ಕ ಪರಿಶೋಧನಾ ಶುಲ್ಕ
0–01	ಲೆಕ್ಕ ಪರಿಶೋಧನಾ ಶುಲ್ಕ

38. ಸಾಮಾನ್ಯ ಅಭಿಪ್ರಾಯ:–

1. ಪ್ರತ್ಯೇಕ ಖಾತೆವಾರು (ಯೋಜನೆವಾರು) ನಗದು ಪುಸ್ತಕ ನಿರ್ವಹಿಸುವುದು.
2. ನಗದು ವಹಿಯನ್ನು ಕರ್ನಾಟಕ ಆರ್ಥಿಕ ಸಾಹಿತೆ 328 ರಿಂದ 332 ರಂತೆ ಕ್ರಮವಹಿಸಿ ನಿರ್ವಹಿಸುವುದು.
3. ಪ್ರಾಧಿಕಾರವು ಭೂ ಅಭಿವೃದ್ದಿದಾರರು RERAದಲ್ಲಿ ನೊಂದಣಿ ಮಾಡಿರುವ ಬಗ್ಗೆ ಪ್ರಸಕ್ತ ಸಾಲಿನಲ್ಲಿ ಖಾತರಿಪಡಿಸಿಕೊಂಡಿರುವುದು ಕಂಡುಬಂದಿರುವುದಿಲ್ಲ. ಮುಂದಿನ ದಿನಗಳಲ್ಲಿ ಇದರ ಬಗ್ಗೆ ಖಾತರಿಪಡಿಸಿಕೊಂಡು ಅನುಮೋದನೆ ನೀಡುವುದು.
4. ವಿವಿಧ ಬ್ಯಾಂಕುಗಳಲ್ಲಿ ತೊಡಗಿಸಿರುವ ಎಫ್‌ಡಿಆರ್ ಮೊತ್ತ ಪಕ್ವವಾದ ಮೊತ್ತ ಬ್ಯಾಂಕ್ ಲೆಕ್ಕ ಸಮನ್ವಯ ಮಾಡುವುದು.
5. ಬ್ಯಾಂಕಿನಿಂದ ಖಾತೆವಾರು ಪ್ರತಿ ಮಾಹೆ ಪ್ರತ್ಯೇಕ ಬ್ಯಾಂಕು ಪಾಸ್ ಶೀಟ್ ಪಡೆದು ಕಡ್ಡಾಯವಾಗಿ ಲೆಕ್ಕ ಸಂಕಲನ ಮಾಡುವುದು.
6. ವರ್ಷಾಂತ್ಯಕ್ಕೆ ಬಾಕಿ ಇರುವ ಲೆಕ್ಕಪರಿಶೋಧನಾ ಶುಲ್ಕದ ಪಾವತಿಗೆ ಕ್ರಮವಹಿಸುವುದು.
7. ಪಿಂಚಣಿ ವಂತಿಕೆಯನ್ನು ರಾಜ್ಯ ಸಂಚಿತ ನಿಧಿಗೆ ಪಾವತಿಸುವ ಬಗ್ಗೆ ಕ್ರಮವಹಿಸುವುದು.

ಲೆಕ್ಕ ಪತ್ರಗಳ ನಿರ್ವಹಣೆಯಲ್ಲಿ ಇನ್ನೂ ಹೆಚ್ಚಿನ ಸುಧಾರಣೆ ಅಗತ್ಯ ಹಾಗೂ ಸಾಮಾನ್ಯ ನಗದು ಪುಸ್ತಕವನ್ನು ನಿಗಧಿತ ನಮೂನೆಯಲ್ಲಿ ನಿರ್ವಹಿಸದಿರುವುದು ಮತ್ತು ಲೆಕ್ಕ ಸಮನ್ವಯ ಮಾಡದಿರುವುದು ಅಲ್ಲದೆ ಯೋಜನಾ ಮಂಡಳಿಗೆ ಶೇ.5ರಷ್ಟು ವಂತಿಗೆ ಹಣ ಪೂರ್ಣವಾಗಿ ಪಾವತಿಸದಿರುವುದು ಮತ್ತು ಈ ಬಗ್ಗೆ ಒಂದು ಡಿಸಿಬಿ ವಹಿ ನಿರ್ವಹಿಸದಿರುವುದು ಪ್ರಮುಖ ನ್ಯೂನ್ಯತೆಯಾಗಿದ್ದು, ಈ ಬಗ್ಗೆ ಕ್ರಮ ವಹಿಸಲು ತಿಳಿಸಿದೆ.

ಅಪರ ನಿರ್ದೇಶಕರು,
ಸ್ಥಳೀಯ ಲೆಕ್ಕ ಪರಿಶೋಧನ ವರ್ತುಲ
ಬೆಂಗಳೂರು

ಆನೇಕಲ್ ಯೋಜನಾ ಪ್ರಾಧಿಕಾರದ 2020–21ನೇ ಸಾಲಿನ ವರ್ಗೀಕೃತ ಜಮಾ–ಖರ್ಚಿನ ವಿವರಗಳು

Receipts	Amount	Expenditure	Amount
ಉತ್ತಮತೆ ಶುಲ್ಕ	148339857	ಅಧಿಕಾರಿಗಳ ವೇತನ	**4073049**
ಪರಿಶೀಲನೆ ಶುಲ್ಕ	613803	ಔಟ್ ಸೋರ್ಸ ನೌಕರರ ವೇತನ	**2017703**
ಉಸ್ತುವಾರಿ ಶುಲ್ಕ	**603073**	ವಾಹನ ಬಾಡಿಗೆ	**1617160**
ನಕ್ಷೆ ಪ್ರತಿ	**971000**	ಕಟ್ಟಡ ಬಾಡಿಗೆ	**413824**
ಭದ್ರತಾರೇವಣಿ	**12973030**	ದೂರವಾಣಿ	**24257**
ದೃಢಿಕೃತ ನಕ್ಷೆಪ್ರತಿ	**21773**	ಲೇಖನಾ ಸಾಮಾಗ್ರಿ	**155302**
ಮಾಹಿತಿ ಹಕ್ಕು	**21960**	ವಿದ್ಯುತ್ ಶುಲ್ಕ	**30113**
ಠೇವಣಿಗಳ ಹಿಂಪಡೆತ(ಉತ್ತಮತೆ)	**902363362**	ಕಛೇರಿ ಕೈ ಹಣ	**116849**
ಠೇವಣಿಗಳ ಹಿಂಪಡೆತ(ಕೆರೆ ಸಂರಕ್ಷಣೆ)	**952335159**	ಆದಾಯ ತೆರಿಗೆ ಪಾವತಿ	**181221**
ಕೆರೆ ಅಭಿವೃದ್ದಿ ಶುಲ್ಕ	**68213976**	STPB Funds	**2006040**
ಬ್ಯಾಂಕ್ ಬಡ್ಡಿ	**3635406**	ಪ್ರಕಟಣೆ ವೆಚ್ಚ	**1151437**
ಭೂ ಉಪಯೋಗ ಬದಲಾವಣೆ ಅರ್ಜಿ	**8900**	ಠೇವಣಿಗಳ ಹೂಡಿಕೆ(ಉತ್ತಮತೆ)	**1010000000**
ದಂಡ	**19822000**	ಠೇವಣಿಗಳ ಹೂಡಿಕೆ(ಕೆರೆ ಸಂರಕ್ಷಣೆ)	**1032973000**
ಪತ್ರಿಕಾ ಪ್ರಕಟಣೆ	**1192350**	Xerox Charges	**11210**
ಸಿ.ಎ.ನಿವೇಶನ ಮಾರಟ	**15763545**	ಅಂಚೆ ಚೀಟಿ	**10000**
ನೀರು ಸರಬರಾಜು ಸೆಸ್	**29677200**	ವಕೀಲರ ಶುಲ್ಕ	**182000**
ರಿಂಗೆ ರೋಡ್ ಸೆಸ್	**29976150**	ಕಂಪ್ಯೂಟರ್ ನಿರ್ವಹಣೆ	**17729**
ಸ್ಲಂ ಸೆಸ್	**15934050**	Projector	**97920**
ಎಂ.ಆರ್.ಡಿ.ಎಸ್.	**76713550**	ಪ್ರಾಧಿಕಾರದ ಅಭಿವೃದ್ದಿ ಕಾಮಗಾರಿ	**40924701**
		ಲೆಕ್ಕ ಪರಿಶೋಧನಾ ಶುಲ್ಕ	**1487146**
		ಮುಖ್ಯಮಂತ್ರಿ ಪರಿಹಾರ ನಿಧಿ	**20008125**
		ಅರ್ಜಿದಾರರಿಗೆ ಹಿಂಪಾವತಿ	**328000**
		ಮುದ್ರಣ	**97089**
		ಇತರೆ	**163492**
		Bank Charges	**7895**
ಒಟ್ಟು ಸ್ವೀಕೃತಿ	**2279186746**	**ಒಟ್ಟು ಖರ್ಚು**	**2118095262**
ಪ್ರಾರಂಭಿಕ ಶಿಲ್ಕು	**97287115**	**ಅಂತಿಮ ಶಿಲ್ಕು**	**258378599**
ಒಟ್ಟು	**2376473861**	**ಒಟ್ಟು**	**2376473861**